ಅಪರಂಜಿ

ಅಕ್ಟೋಬರ್ 2000

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಶ್ರೀನಿವಾಸವೈದ್ಯ

ಹೆಚ್. ಗೋಪಾಲಕೃಷ್ಣ

ಶೋಭಾ ಪ್ರಮೋದ್

ಅರುಣಾ ಆರ್. ಕಾರಂತ

ಈರಪ್ಪ ಎಂ. ಕಂಬಳಿ

ಡಾ॥ ಶ್ರೀ ವೆಂಕಟರಮಣ

ಕೆಎಸ್ಸಾರ್

ನೀರಗುಂದ ಕೇಶವಮೂರ್ತಿರಾವ್

ಬಿಡಿ ಪ್ರತಿ: ರೂ. 5.00



ಕೊರವಂಜಿಗೆ ಲಕ್ಷಣ್ ಬರೆದ ವ್ಯಂಗ ಚಿತ್ರ

ಶುಭಾಶಗಳೊಂದಿಗೆ

ವಿಜಯಾ ಮತ್ತು ಆನಂದ್ ದೇಸಾಯ್

ಆಸ್ಟಿನ್, ಟೆಕ್ಸಸ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 18 ಅಕ್ಟೋಬರ್- 2000 ಸಂಚಿಕೆ - 1

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



□ ಪ್ರಕಾಶ್

ಕಪಿಲ್‌ದೇವ್ ರಾಜೀನಾಮೆ

- ಕ್ರೀಡಾಸುದ್ದಿ

ಪತ್ರವನ್ನು 'ಲೇ, ಲೇ' ಅಂದರಂತೆ!!

★★★

ಹೊರೆಯಿಲ್ಲದಂತೆ ಪೆಟ್ರೋಲ್ ಬೆಲೆ ಏರಿಕೆ

- ಸುದ್ದಿ

ಶಾಲಲ್ಲಿ ಸುತ್ತಿ.....!!

★★★

ಒಲಂಪಿಕ್ಸ್ 'ಗಾತ್ರ'ದ ಬಗ್ಗೆ ಆತಂಕ

- ಸುದ್ದಿ

ಹುಶ್, ಮಲ್ಲೇಶ್ವರಿಗೆ ಹೇಳಬೇಡಿ!!

★★★

ನನಗೆ ಅನ್ಯಾಯವಾಗಿಲ್ಲ

- ಸುಷ್ಮಾ ಸ್ವರಾಜ್

ಜಟ್ಟಿ ಬಿದ್ದರೂ.....!!

★★★

ಮಾಹಿತಿ ತಂತ್ರಜ್ಞಾನ ಶಿಕ್ಷಣ ದುಬಾರಿ

- ಪತ್ರಿಕೆ

ಇದಕ್ಕೆ ಏನಾದರೂ ತಂತ್ರ ಹುಡುಕಬೇಕು!!

★★★

ಆಸ್ತಿ ತೆರಿಗೆ; ಶೀಘ್ರ ಸುಗ್ರೀವಾಜ್ಞೆ

- ಪತ್ರಿಕೆ

ಶ್ರೀರಾಮ ರಕ್ಷೆ!!

★★★

ಹನ್ನೆರಡನೆಯ ಶತಮಾನದ ವಿಗ್ರಹಗಳ ವಶ

- ಸುದ್ದಿ

ಕದ್ದವರ 'ಗ್ರಹ'ಚಾರ!!

★★★

ಸಚಿವರ ಮನೆಯಲ್ಲಿ ಆದಾಯ ತೆರಿಗೆ ದಾಳಿ ನಡೆದಿಲ್ಲ; ಸ್ಪಷ್ಟನೆ

- ಪತ್ರಿಕೆ

ಬೆಂಕಿ ಇಲ್ಲದೆಯೇ ಹೊಗೆ?!

★★★

ಕಾರ್ಯಪಡೆ ದೌರ್ಜನ್ಯ ವಿಚಾರಣೆಗೆ ತಡೆ ವಿಸ್ತರಣೆ

- ಸುದ್ದಿ

ಕಾರ್ಯಪಡೆಯೇ ಬೇಲಿ ನುಂಗುವ ಕಾಲ ಬಂತೇ ಎಂದು ಅಪರಂಜಿ ಚಿಂತಾಕ್ರಾಂತಳಾದಳಂತೆ!!

★★★

ನಮ್ಮ ನಿಮ್ಮಲ್ಲಿ

ಸ್ಕಾಟ್ಲೆಂಡಿನ ಅಬರ್ಡೀನಿನಲ್ಲಿದ್ದ ನನ್ನ ಮಗಳ ಮನೆಗೆ ಹೋದ ಹೊಸದರಲ್ಲಿ ದಿನಕ್ಕೆ ಏಳೆಂಟು ಬಾರಿಯಾದರೂ ಮನೆಯಾಚೆಯಿಂದ ಆಂಬುಲೆನ್ಸ್‌ಗಳ ಪೀಂ-ಪಿಂ ಚೀತ್ಕಾರ ಕೇಳಿಬರುತ್ತಿತ್ತು. ಓಹೋ ಈ ಊರಿನಲ್ಲಿ ವಾಹನಗಳ ಸಂಖ್ಯೆ ಜಾಸ್ತಿ ಇರಬೇಕು. ಅದಕ್ಕೇ ಅಪಘಾತಗಳೂ ಸಹಜವಾಗಿಯೇ ಹೆಚ್ಚಾಗಿರಲು ಸಾಧ್ಯ. ಅಥವಾ ಸಮುದ್ರದಿಂದ ಎಣ್ಣೆ ತೆಗೆಯುವ ಯಂತ್ರಗಳೊಡನೆ ಮಾಡುವ ಕೆಲಸ accident prone ಇರಬಹುದೇನೋ ಅಂತೆಲ್ಲಾ ನಾನು ಉತ್ತರ ಹುಡುಕುತ್ತಿದ್ದೆ. ಹಠಾತ್ತನೆ ನನಗೆ ಜ್ಞಾನೋದಯವಾದದ್ದು ಎರಡು ದಿನಗಳ ನಂತರ. ನನ್ನ ಅಳಿಯನಿಗೆ ಅಲ್ಲಿನ ಸರ್ಕಾರೀ ಆಸ್ಪತ್ರೆಯಲ್ಲಿ ಕೆಲಸ. ಆ ಆಸ್ಪತ್ರೆಯ ಪಕ್ಕದಲ್ಲೇ ಡಾಕ್ಟರುಗಳ ವಸತಿ. ಊರಿನಲ್ಲಿ ಎಲ್ಲಿ ಅಪಘಾತವಾದರೂ ಎಲ್ಲ ಆಂಬುಲೆನ್ಸ್‌ಗಳೂ ಆಸ್ಪತ್ರೆಗೆ ತಾನೇ ಬರಬೇಕು. ''ಆಸ್ಪತ್ರೆಯಲೊಂದು ಮನೆಯ ಮಾಡಿ ಆಂಬುಲೆನ್ಸಿಗಂಜಿದೊಡೆಂತಯ್ಯಾ?'' ಅಂತ ನನಗೆ ನಾನೇ ಸಮಾಧಾನ ಹೇಳಿಕೊಂಡೆ.

ಸ್ಕಾಟಿಷ್ ಟಿ.ವಿ.ಯಲ್ಲಿ ನನಗೆ ಅತ್ಯಂತ ಕುತೂಹಲ ಮೂಡಿಸಿದ ಕಾರ್ಯಕ್ರಮವೆಂದರೆ ''ವಾಟರ್ ಕಲರ್ ಛಾಲೆಂಜ್''. ಇದೊಂದು ಜಲವರ್ಣ ಚಿತ್ರ ರಚನಾ ಸ್ಪರ್ಧೆ. ಪ್ರತಿದಿನ ಬ್ರಿಟನ್ನಿನ ಯಾವುದಾದರೊಂದು ರಮಣೀಯ ಕ್ಷೇತ್ರದಲ್ಲಿ ಈ ಸ್ಪರ್ಧೆ ನಡೆಯುತ್ತದೆ. ಮೂರು ಜಲವರ್ಣ ಚಿತ್ರಕಾರರು ಇಂತಹ ಸುಂದರ ತಾಣವೊಂದರಲ್ಲಿ ಕಲೆತು ತಮ್ಮ ಕಲ್ಪನಾಲಹರಿಯನ್ನು ಹರಿಯಬಿಟ್ಟು ಒಂದೇ ದೃಶ್ಯವನ್ನು ನೋಡಿ ತಮ್ಮ ಅನುಭವಕ್ಕೆ ತಕ್ಕಂತೆ ಚಿತ್ರ ಮೂಡಿಸುವುದು ಸ್ಪರ್ಧೆಯ ಉದ್ದೇಶ. ಚಿತ್ರರಚನೆ ಮುಗಿದ ಮೇಲೆ ಒಬ್ಬ ಹೆಸರಾಂತ ಚಿತ್ರಕಾರ, ಅಥವಾ ಚಿತ್ರಕಾರ್ತಿ, ಈ ಮೂವರ ಕೃತಿಗಳನ್ನು ಪರಿಶೀಲಿಸಿ ಉತ್ತಮವೆಂದು ನಿರ್ಧರಿಸಿದ ಚಿತ್ರದ ಕಲೆಗಾರನಿಗೆ ಬಹುಮಾನ ಸಿಗುತ್ತದೆ. ಈ ರೀತಿ ಬೇರೆ ಬೇರೆ ನಿಸರ್ಗ ಧಾಮಗಳಲ್ಲಿ ನಡೆಯುವ ಸ್ಪರ್ಧೆಗಳ ವಿಜೇತರು ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಹಂತದಲ್ಲಿ ಅತ್ಯುತ್ತಮ ಚಿತ್ರ ರಚಿಸಿದ ಕಲೆಗಾರನಿಗೆ ಮೂರು ವಾರಗಳ ಕಾಲ "Tropical Painting Holiday' ಯ ಬಹುಮಾನ. ಇದೊಂದು ಎಲ್ಲ ಖರ್ಚುಗಳನ್ನೂ ಭರಿಸಿದ ಯಾತ್ರೆ. ಹವಾಯಿಯಲ್ಲೋ, ಭಾರತದಲ್ಲೋ, ಮೂರು ವಾರಗಳ ಕಾಲ ನಿರ್ಯೋಚನೆಯಿಂದ, ಬೇಕಾದ ವರ್ಣಚಿತ್ರಗಳನ್ನು ರಚಿಸುತ್ತಾ ಕಾಲ ಕಳೆಯುವುದು ಈ ಯಾತ್ರೆಯ ಗುರಿ. ಸರೋವರಗಳ ನಾಡಾದ ಕಂಬ್ರಿಯಾದ ಕಾನಿಸ್ಟನ್ ವಾಟರ್ಸ್ (ವರಕವಿ ವರ್ಡ್ಸ್ ವರ್ತ್ ಈ ಸರೋವರದ ಬಳಿಯಲ್ಲಿ

ವಾಸಿಸುತ್ತಿದ್ದ), ಸ್ಕಾಟ್ಲೆಂಡಿನ ಮನಮೋಹಕ ಫೈವಿ ಕಾಸಲ್, ಇವುಗಳ ಬಳಿ ನಡೆದ ಸ್ಪರ್ಧೆಗಳನ್ನು ನಾನು ನೋಡಿದೆ. ಕೌತುಕವೆಂದರೆ, ವೃತ್ತಿಯಲ್ಲಿ ಡಾಕ್ಟರುಗಳು, ಇನ್ಶೂರೆನ್ಸ್ ಏಜೆಂಟರು, ಪೋಲೀಸ್ ಅಧಿಕಾರಿಗಳು ಹೀಗೆ ವಿವಿಧ ಕ್ಷೇತ್ರಗಳಿಂದ ಬಂದ ಜನಗಳನ್ನು ಇಲ್ಲಿ ಹವ್ಯಾಸೀ ಕಲೆಗಾರರಾಗಿ ಕಾಣಬಹುದು. ಚಿತ್ರರಚನೆ ಹವ್ಯಾಸವಾದರೂ ಕಲೆಯ ಉತ್ಕೃಷ್ಟತೆಯನ್ನು ನೋಡಿಯೇ ಸವಿಯಬೇಕು. ಅನೇಕ ಕಲಾಭ್ಯಾಸಿಗಳಿಗೆ ಮಾರ್ಗದರ್ಶನ ನೀಡಬಲ್ಲ ಕಸುವನ್ನು ಈ ಸ್ಪರ್ಧೆಗಳಲ್ಲಿ ಕಾಣಬಹುದಾಗಿತ್ತು. ಬೆಂಗಳೂರಿಗೆ ಹಿಂತಿರುಗಿದ ಮೇಲೆ ನನ್ನ ಪರಿಚಯದ ಕಲೆಗಾರ ಬಾಗೂರನೊಂದಿಗೆ ಈ ಕುರಿತು ಮಾತನಾಡುತ್ತಾ, ''ನಮ್ಮ ಜನಗಳಲ್ಲಿ ಈ ತೆರನಾದ ಕಲಾಭಿಮಾನ, ಚಿತ್ರಕಲೆಯಲ್ಲಿ ಆಸಕ್ತಿ ಏಕೆ ಕಂಡುಬರುತ್ತಿಲ್ಲ?'' ಎಂದು ಕೇಳಿದಾಗ, ಆತ ''ಸಾರ್, ಮೊನ್ನೆ, ರಾಜ್ಯಮಟ್ಟದ educational policy ಚರ್ಚೆಯೊಂದರಲ್ಲಿ ನನಗೂ ಭಾಗವಹಿಸುವ ಅವಕಾಶ ದೊರಕಿತ್ತು. ಪ್ರೈಮರಿ ಹಂತದಲ್ಲಿ ಆರ್ಟ್ ಮತ್ತು ಡ್ರಾಯಿಂಗ್ ಟೀಚರುಗಳ ಅಗತ್ಯವಿಲ್ಲ ಎಂದು ಅನೇಕರು ವಾದಮಾಡಿ ಅದರಿಂದ ಉಳಿತಾಯವಾದ ಹಣವನ್ನು ವಿಜ್ಞಾನ ಮತ್ತು ಗಣಿತದ ಬೋಧನೆಗೆ ಬಳಸಬೇಕೆಂದು ಒತ್ತಾಯಿಸಿದರು. ಅಂತಹ ಉನ್ನತ ಮಟ್ಟದಲ್ಲೇ ಕಲೆಯ ಬಗೆಗಿನ ಅರಿವು ಹೀಗಿದ್ದರೆ, ಇನ್ನು ಜನಸಾಮಾನ್ಯರಲ್ಲಿ ಕಲಾಭಿಮಾನ ಎಲ್ಲಿಂದ ಬಂದೀತು?'' ಅಂದ. ವೆಂಕಟಪ್ಪನವರ ಆತ್ಮಕ್ಕೆ ಶಾಂತಿಯಿರಲಿ, ಅನ್ನಿಸಿತು. (ದಯವಿಟ್ಟು ವೆಂಕಟಪ್ಪ ಯಾರು? ಅಂತ ಮಾತ್ರಾ ಕೇಳಬೇಡಿ!).

ಈ ಬಾರಿ ಇಂಗ್ಲೆಂಡಿಗೆ ಹೋದಾಗ ಹೊಸದಾಗಿ ಪುನಃಶ್ಚೇತನಗೊಂಡ ಪಂಚ್ ಪತ್ರಿಕೆಯನ್ನು ನೋಡಬೇಕು ಅಂತ ಹೊರಡುವ ಮೊದಲೇ ನಿರ್ಧರಿಸಿದ್ದೆ. ಮೊದಲ ಒಂದೆರಡು ವಾರಗಳು, ಯಾವ ಪುಸ್ತಕ ವ್ಯಾಪಾರಿಯ ಬಳಿಯೂ ಈ ಸಂಚಿಕೆ ಕಣ್ಣಿಗೆ ಬೀಳಲಿಲ್ಲ. ಪತ್ರಿಕೆ ಪುನಃ ನಿಂತೇ ಹೋಯಿತೇನೋ ಅಂದುಕೊಂಡೆ. ಆಮೇಲೆ ಒಂದು ಬಾರಿ ನನ್ನ ಹಳೆಯ ಮಿತ್ರ ಅಲನ್ ಸಿಕ್ಕಾಗ ಅವನನ್ನ ಪಂಚ್ ಬಗ್ಗೆ ಕೇಳಿದೆ. ''ಪಂಚ್ ಪುನಹ ಪ್ರಾರಂಭವಾಗಿರೋದೇನೋ ನಿಜ. ಆದರೆ ಅದು ಸಂತಸದ ಸುದ್ದಿಯೇನಲ್ಲ. ಈ ಹೊಸ ಅವತಾರದಲ್ಲಿ ಅದು ತನ್ನ ತಿಳಿಹಾಸ್ಯದ ಸೊಗಡನ್ನು ಕಳೆದುಕೊಂಡಿದೆ. ಅದರಲ್ಲಿನ ಬಹುಪಾಲು ಬರಹಗಳು ಸಮಾಜದ ಯಾರಾದರೂ ಪ್ರತಿಷ್ಠಿತರನ್ನು ವಿನಾಕಾರಣ ನಿಂದಿಸಿ, ಗೇಲಿ ಮಾಡಿ ಚೀಪ್ ಪಬ್ಲಿಸಿಟಿ ಗಳಿಸುವ ಉದ್ದೇಶದಿಂದ ಬರೆದವು. ಹೀಗೆ ಅವಹೇಳನಕ್ಕೆ ಗುರಿಯಾದ ಯಾರಾದರೂ ಪತ್ರಿಕೆಯನ್ನು ಮಾನನಷ್ಟಕ್ಕಾಗಿ ಕೋರ್ಟಿಗೆ ಎಳೆದರೆ ಪಂಚ್ ತನ್ನ ದಿವಾಳಿತನದ ಕಾರಣ ಮುಂದೆ ನೀಡಿ ಒಂದು ಕ್ಷಮಾಪಣೆ ಕಾಲಂ ಬರೆದು ತಪ್ಪಿಸಿಕೊಳ್ಳುವ ದಾರಿ ಹುಡುಕಿಕೊಂಡಿದೆ. ಒಟ್ಟಿನಲ್ಲಿ

a sad end for a glorious tradition!" ಅಂದ. ಇದಾದ ಕೆಲವು ದಿನಗಳ ನಂತರ ಅಳಿಯ, ಮಗಳೊಂದಿಗೆ ಡಾನ್ಕ್ಯಾಸ್ಟರಿನಿಂದ ಗ್ಲಾಸ್ಗೋಗೆ ಹೋಗುವ ದಾರಿಯಲ್ಲಿ ಊಟಕ್ಕೆಂದು ಕಾರ್ಲೈಲ್‌ನಲ್ಲಿ ಕಾರು ನಿಲ್ಲಿಸಿದೆವು. ಮೋಟರ್ ವೇ ಬದಿಗಿನ ಸರ್ವಿಸಸ್ ಏರಿಯಾದಲ್ಲಿನ ರೆಸ್ಟುರಾಂಟಿನಲ್ಲಿ ಮಿಕ್ಕ ತಿನಿಸುಗಳ ಜೊತೆಗೆ ಪಲಾವ್ ಹಾಗೂ ತಂದೂರಿ ಚಿಕನ್‌ಗಳೂ ಇದ್ದವು. ಈ ಬಾರಿಯ ಇಂಗ್ಲೆಂಡ್ ಭೇಟಿಯಲ್ಲಿ ನಾನು ಕಂಡ ಸಂತಸಕರ ಬದಲಾವಣೆಗಳಲ್ಲಿ ಇದೊಂದು. ಎಲ್ಲ ಸೂಪರ್ ಮಾರ್ಕೆಟ್‌ಗಳು, ರೆಸ್ಟುರಾಗಳಲ್ಲಿ ಒಂದೆರಡಾದರೂ ಭಾರತೀಯ ತಿನಿಸುಗಳನ್ನು ಕಾಣಬಹುದು. ಊಟವಾದನಂತರ ಮ್ಯಾಗಜೀನ್ ಸ್ಟಾಂಡಿನ ಮೇಲೆ ಕಣ್ಣಾಡಿಸುತ್ತಿದ್ದಾಗ ಪಂಚ್ ಕಣ್ಣಿಗೆ ಬಿತ್ತು. ಸಂಚಿಕೆಯೊಂದನ್ನು ಕೊಂಡು ಹಾಗೇ ಕಣ್ಣಾಡಿಸಿದೆ. ಮೊದಲಿಗೇ ಗ್ರೌಚೋ ಕ್ಲಬ್ ಎಂಬ ಬರಹ ಕಣ್ಣಿಗೆ ಬಿತ್ತು. ಆ ಕ್ಲಬ್ಬಿನ ಮುಖ್ಯಸ್ಥರೊಬ್ಬರು ಕೊಕೇನ್ ಮಾರಾಟ ಮಾಡುತ್ತಿದ್ದರೆಂಬ ಹಿಂದಿನ ಸಂಚಿಕೆಯ ಬರಹಕ್ಕೆ ಆ ಕ್ಲಬ್ಬಿನವರು ಕಳುಹಿಸಿದ ಲೀಗಲ್ ನೋಟೀಸಿನ ಜೊತೆಗೆ ಪಂಚ್‌ನ ಉತ್ತರ. ಎಲ್ಲೋ ಜರ್ನಲಿಸಂ ಎಂಬ ಮಾತನ್ನ ಕೇಳಿದ್ದೆ. ಈಗ ಓದುವ ಪ್ರಸಂಗ ಬಂತು. ಬಚ್ಚಲಿನ ಮಾತುಗಳಲ್ಲಿ ಒಬ್ಬರನ್ನೊಬ್ಬರು ಬಯ್ದಾಡುವುದರಲ್ಲಿ ಇರಬಹುದಾದ ತಿಳಿಹಾಸ್ಯ ನನಗಂತೂ ಅರ್ಥವಾಗಲಿಲ್ಲ. ರೆಪ್ಟೈಲ್ ಹೌಸ್ ಎಂಬ ಇನ್ನೊಂದು ಶೀರ್ಷಿಕೆಯಡಿ ಇತರ ಎಲ್ಲ ಇಂಗ್ಲಿಷ್ ಪತ್ರಿಕೆಗಳ ಪತ್ರಕರ್ತರನ್ನು ಗೇಲಿಮಾಡುವ ನಿಂದಿಸುವ ಕಾಲಂಗಳು. ಕೊರವಂಜಿಯ ಹುಟ್ಟಿಗೆ ಕಾರಣವಾದ, ರಾ.ಶಿ.ಯವರ ಹಾಸ್ಯಪ್ರಜ್ಞೆಯನ್ನು ಹರಿತಗೊಳಿಸಿದ ನಲವತ್ತರ ದಶಕದ ಪಂಚ್‌ನ ಅವನತಿಯನ್ನು ಕಂಡು ಸ್ವಲ್ಪ ದುಃಖವಾದರೂ, ನಾವೇ ಪರವಾಗಿಲ್ಲ, ನಮ್ಮ ಕಣ್ಣಿಗೆ ಕಾಣುವ ಮೌಲ್ಯಗಳನ್ನ ಕೈಲಾದಮಟ್ಟಿಗೆ ಉಳಿಸಿಕೊಂಡು ಬರುತ್ತಿದ್ದೇವೆ ಅನ್ನಿಸಿತು. ಇದ್ದದ್ದರಲ್ಲಿ ಪರವಾಗಿಲ್ಲ ಎನ್ನಬಹುದಾದ ಹಲವು ವ್ಯಂಗ್ಯ ಚಿತ್ರಗಳನ್ನ ಪಂಚ್‌ನಿಂದ ಆರಿಸಿ ಈ ಸಂಚಿಕೆಯಲ್ಲಿ ಕೊಟ್ಟಿದ್ದೇನೆ.

ನಾವಿದ್ದ ಊರು ಅಬರ್ಡೀನ್ ಅಂತ ಹಿಂದೆಯೇ ಹೇಳಿದ್ದೆ. ವಿಸ್ತಾರದಲ್ಲಿ ಇದು ಅಂತಹ ದೊಡ್ಡ ಊರೇನಲ್ಲ. ನಮ್ಮ ಬೆಂಗಳೂರಿನ ಮಲ್ಲೇಶ್ವರದಷ್ಟು ಹರಹಿನ ರೇವು ಪಟ್ಟಣ ಇದು. ಸಮುದ್ರದಾಳದಿಂದ ಎಣ್ಣೆ ತೆಗೆಯುವ ಕೈಗಾರಿಕೆಯ ದೆಸೆಯಿಂದ ಇದು ಅತ್ಯಂತ ದುಬಾರಿ ಪ್ರದೇಶ ಕೂಡ. ಊರು ಹೀಗೆ ಕಿರಿದಾಗಿದ್ದರೂ, ಒಂದು ದೊಡ್ಡ ಷಹರಿನಲ್ಲಿ ಕಾಣಬಹುದಾದ ಆಟದ ಸ್ಟೇಡಿಯಂ, ಸುಸಜ್ಜಿತ ಥಿಯೇಟರ್, ವಿಮಾನ ನಿಲ್ದಾಣ, ಅತ್ಯಂತ ಚಟುವಟಿಕೆಯಿಂದ ಕಾರ್ಯನಿರತವಾದ ಬಂದರು ಇವೆಲ್ಲವೂ ಇಲ್ಲಿವೆ. ನಾನಿದ್ದ ಸಮಯದಲ್ಲಿ, ಅಬರ್ಡೀನ್ ಆರ್ಟ್ಸ್ ಸೆಂಟರಿನಲ್ಲಿ ನಡೆದ ನಾಟಕವೊಂದನ್ನು ನಾನು

ನೋಡಿದೆ. ನಾಟಕದ ಹೆಸರು Sex & Chocolate. ಖ್ಯಾತ ನಟಿ ಫಿಯೋನಾ ನೋಲೆಸ್ ಈ ನಾಟಕದಲ್ಲಿ ಏಕಪಾತ್ರಭಿನಯ ಮಾಡಿ ಸಾಕಷ್ಟು ಕೀರ್ತಿ ಗಳಿಸಿದ್ದಳು. ''ಕಾಮಿಡಿ ನೋಡಬೇಕು ಅಂತಿದ್ದೆಯಲ್ಲಪ್ಪಾ, ಇಗೋ ನೋಡು, ಈ ನಾಟಕದ ರಿವ್ಯೂ ಚೆನ್ನಾಗಿದೆ. ಟಿಕೆಟ್ ಬುಕ್ ಮಾಡಿದ್ದೇನೆ. ಸಂಜೆ ಹೋಗೋಣ'' ಅಂತ ನನ್ನ ಮಗಳ ಶಿಫಾರಸ್ಸು ಬೇರೇ. ನಾಟಕಕ್ಕೆ ಹೋದೆ.


ನಾಟಕಶಾಲೆ, ವಿಸ್ತಾರದಲ್ಲಿ ನಮ್ಮ ಬಸವನಗುಡಿಯಲ್ಲಿನ ಗಾಯನ ಸಮಾಜದಷ್ಟಿರಬಹುದೇನೋ. ಆದರೆ ಅಲ್ಲಿಗೆ ಹೋಲಿಕೆ ನಿಲ್ಲುತ್ತದೆ. ತೀರ ಆಧುನಿಕ ಪರಿಕರಗಳಿಂದ ಕಂಗೊಳಿಸುತ್ತಿದ್ದ ಆ ನಾಟ್ಯಮಂದಿರ, ಅದರಲ್ಲಿನ ಸುಖಾಸನದಲ್ಲಿ ಕುಳ್ಳಿರುವುದೇ ಒಂದು ಸುಯೋಗ ಅನ್ನಿಸುವಷ್ಟು ಚೆನ್ನಾಗಿತ್ತು. ಸ್ಟೇಜಿನ ಮೇಲೆ ಒಂದು ತುದಿಯಲ್ಲಿ ಒಂದು ಕುರ್ಚಿ, ಇನ್ನೊಂದು ಕೊನೆಯಲ್ಲಿ ಒಂದು ಹ್ಯಾಟ್ ಸ್ಟಾಂಡ್ ಅಷ್ಟೇ. ಬೇರೆ ಯಾವ ವಿಧವಾದ ರಂಗಸಜ್ಜಿಕೆ ಅಲ್ಲಿ ಕಂಡುಬರಲಿಲ್ಲ. ನಾಟಕ ಪ್ರಾರಂಭವಾಗುವಾಗ ರಂಗಮಂದಿರದಲ್ಲಿ ಕಗ್ಗತ್ತಲು. ಮೆಲ್ಲನೆ ಸ್ಪಾಟ್ ಲೈಟ್ ರಂಗದ ಒಂದು ತುದಿಯಲ್ಲಿನ ಹ್ಯಾಟ್ ಸ್ಟಾಂಡಿನ ಮೇಲೆ ಬೀಳುತ್ತದೆ. ಕರೀ ಪ್ಯಾಂಟ್, ಗುಲಾಬಿ ಟೀ ಷರ್ಟಿನ ಮೇಲೆ ಬೂದು ಬಣ್ಣದ ಜರ್ಕಿನ್ ತೊಟ್ಟ ಜೇನ್ ಶುಕ್ರವಾರ ಸಂಜೆ ಆಫೀಸಿನಿಂದ ಹೊರಡುವ ತರಾತುರಿಯಲ್ಲಿರುತ್ತಾಳೆ. ಅಂದು ಜೇನಳ ಐವತ್ತನೆಯ ಹುಟ್ಟುಹಬ್ಬ, ರಾತ್ರಿ ಒಂಭತ್ತಾಗಿದೆ. ಆಫೀಸಿನ ಮಿಕ್ಕ ಸಹೋದ್ಯೋಗಿಗಳೆಲ್ಲಾ ಆಗಲೇ ಮನೆಗಳಿಗೆ ತೆರಳಿದ್ದಾರೆ. ಜೇನಳನ್ನು ಇದಿರುಗೊಳ್ಳಲು ಮನೆಯಲ್ಲಿ ಯಾರೂ ಇಲ್ಲ. ಗಂಡನಿಂದ ಬೇರೆಯಾಗಿ, ಕಳೆದ ವರ್ಷ ರೆಕ್ಕೆ ಬಲಿತ ಮಕ್ಕಳೂ ಗೂಡಿನಿಂದ ಹೊರಬಿದ್ದಾಗಿನಿಂದ, ಪ್ರತಿ ಸಂಜೆ ಇದೇ ಸ್ಥಿತಿ ಜೇನಳದು. ಮನೆ ಸೇರಿ, ಫ್ರಿಜ್ ಕ್ಲೀನ್ ಮಾಡಿ, ಒಬ್ಬಳೇ ಕುಳಿತು ಬರ್ತ್‌ಡೇ ಕೇಕ್ ತಿನ್ನಬೇಕಾದ ತನ್ನ ಪರ್ಸ್ಥಿತಿಯ ದಾರುಣತೆಯನ್ನು ಸಹಿಸಲಾಗದೇ ಅದಕ್ಕೆ ಬದಲಾಗಿ, ಕಾರು ಹತ್ತಿ, ಊರು ಬಿಟ್ಟು ದಾರಿ ಕಂಡಲ್ಲಿ ಹೋಗುವ ಸಾಹಸದಿಂದಲಾದರೂ ತನ್ನ ಬೇಸರವನ್ನು ಕಳೆದುಕೊಳ್ಳುವ ಛಲ ಜೇನಳಿಗೆ. ಕೇವಲ ತನ್ನ ನಟನೆಯಿಂದ, ಅರಳು ಹುರಿದಂತೆ ಛಟಪಟನೆ ಮಾತನಾಡುತ್ತಾ, ತನ್ನ ಹತಾಶ ಭಾವನೆ, ಸಾಹಸದ ಹೊಸ ಆಲೋಚನೆ ತಂದ ಸಂತಸ ಇವೆಲ್ಲವನ್ನೂ ಯಶಸ್ವಿಯಾಗಿ ಪ್ರೇಕ್ಷಕರಿಗೆ ಮುಟ್ಟಿಸುತ್ತಾಳೆ ಜೇನ್. ಹೀಗೆ ಶುರುವಾದ ನಾಟಕ, ಅನೇಕ ಕೌತುಕಮಯ ತಿರುವುಗಳಿಂದ ಪ್ರೇಕ್ಷಕರನ್ನು ರಂಜಿಸುತ್ತಾ, ನಗಿಸುತ್ತಾ, ಮುಗಿಯುವ ಹಂತ ತಲುಪಿದಾಗ ''ಅರೆ, ಇಷ್ಟು ಬೇಗ ಒಂದೂವರೆ ಗಂಟೆ ಆಗಿಹೋಯಿತೇ'' ಅನ್ನಿಸುವಷ್ಟು ಆಸಕ್ತಿ ಮೂಡಿಸಿದ ನಾಟಕ ಫಿಯೋನಾ ನಟಿಸಿದ Sex & Chocolate. ನಾಟಕದಲ್ಲಿ ಜೇನ್ ಒಮ್ಮೆ ತನ್ನ ಗಂಡನಿಂದ ಬೇರೆಯಾಗುವ

ಪ್ರಸಂಗ ಕುರಿತು ಮಾತನಾಡುತ್ತಾ "ಬೀಚಿನಲ್ಲಿ ನಾವಿಬ್ಬರೂ ಕೂತಿದ್ದೆವು. ಆ ಸಮಯಕ್ಕಾಗಲೇ ನನಗೆ ನಮ್ಮ ಮದುವೆಯ ಬಗ್ಗೆ ಭ್ರಮನಿರಸನವಾಗಿತ್ತು. ಗಂಡನ ಕಡೆ ತಿರುಗಿ "ನಮ್ಮ ಮದುವೆಯಲ್ಲಿ ಅರ್ಥವೇ ಇದ್ದಹಾಗಿಲ್ಲ. The magic is gone" ಅಂತ ನಾನು ಹೇಳಿದಾಗ ಆತನ ಗಂಭೀರ ಧ್ವನಿಯಲ್ಲಿ "Marriage is for life" ಅಂದ. ಅವನು ಆ ಮಾತನ್ನು ಅಂದದ್ದು ಹೆಚ್ಚಲ್ಲ. ಆದರೆ ಆ ಮಾತುಗಳನ್ನು ಆತ ಹೇಳಿದ ರೀತಿ, ಯಾವುದೋ ಜೀವಾವಧಿ ಶಿಕ್ಷೆಗೊಳಗಾದ ಅಪರಾಧಿ ತೀರಾ ಹತಾಶಭಾವನೆಯಿಂದ ತನ್ನ ಕರಾಳ ಭವಿಷ್ಯವನ್ನು ಕುರಿತು ಆಡಿದ ಮಾತುಗಳಂತಿತ್ತು. ಆ ಕ್ಷಣ ನನಗೆ ಅವನನ್ನು ಕಂಡು ಕರುಣೆ ಉಕ್ಕಿ ಬಂದು ಅವನಿಂದ ಬೇರೆಯಾದೆ." ಎಂದಾಗ, ಪ್ರೇಕ್ಷಕರಿಂದ ಹೊರಹೊಮ್ಮಿದ Spontaneous Laughter ನ ಯಾವುದೋ ಒಂದು ಮೂಲೆಯಲ್ಲಿ ಜೀವನದ ದಾರುಣ ಸತ್ಯ ಅಡಗಿದಂತಿತ್ತು.

ಹರಟುತ್ತಾ ಕುಳಿತರೆ ಸಮಯ ಸರಿದಿದ್ದೇ ತಿಳಿಯುವುದಿಲ್ಲ. ಬರಹ ಉದ್ದವಾಯಿತು. ವೆಸ್ಟ್ ಮೂರ್ ಲ್ಯಾಂಡ್‌ನ ಗೋಮಾಳಗಳಲ್ಲಿ ತಿರುಗಾಡಿ ಬರೋಣವೆಂದು ಗೆಳೆಯ ಅಲನ್ ಜೊತೆ ನಾನು ಹೋದಾಗ ನಮಗೆ ದಾರಿ ತಪ್ಪಿದ್ದು, ಡಾನ್ಕ್ಯಾಸ್ಟರಿನಲ್ಲಿ ನಾವು ಖ್ಯಾತ ಚರಿತ್ರಕಾರ ಪಿ.ಬಿ. ದೇಸಾಯರ ಮಗ ಶ್ರೀವತ್ಸ ದೇಸಾಯರನ್ನು ಭೇಟಿಯಾಗಿದ್ದು, ಇವೆಲ್ಲದರ ಬಗ್ಗೆ ಮುಂದಿನ ಕಂತಿನಲ್ಲಿ ಬರೆಯುವೆ. ಅಲ್ಲಿನವರೆಗೆ ವಿಶ್ವಾಸ ಏಕರೀತಿ ಇರಲಿ.

– **ಶಿವಕುಮಾರ್**

ಪಂಚ್ ಕೃಪೆ



ಈ ಡಾಕ್ಟ್ರಿಗೆ ಕಾರ್ ರಿಪೇರಿ ಮಾಡೋ ಹವ್ಯಾಸಾನಂತೆ

ಪುರುಷೋತ್ತಮ ಲಕ್ಷ್ಮಣ ದೇಶಪಾಂಡೆ - ಒಂದು ಶ್ರದ್ಧಾಂಜಲಿ

– ಶ್ರೀನಿವಾಸ ವೈದ್ಯ

ಇದೇ ಜೂನ್ ತಿಂಗಳಿನ ಹನ್ನೆರಡರಂದು ಮಹಾರಾಷ್ಟ್ರದ ಖ್ಯಾತ ಹಾಸ್ಯ ಸಾಹಿತಿ ಪುರುಷೋತ್ತಮ ಲಕ್ಷ್ಮಣ ದೇಶಪಾಂಡೆ ತೀರಿಹೋದರು. ಪು.ಲ. ಎಂದೇ ಜನಪ್ರಿಯರಾಗಿದ್ದ ಅವರು ಮಹಾರಾಷ್ಟ್ರದ ಹಾಸ್ಯಕ್ಕೆ ಇನ್ನೊಂದು ಹೆಸರೇ ಆಗಿದ್ದರು. ಅವರದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ಹಾಸ್ಯಲೇಖಕನಾಗಿ, ನಾಟಕಕಾರನಾಗಿ, ನಟನಾಗಿ, ಸಂಗೀತಗಾರನಾಗಿ, ಚಿತ್ರಪಟ ನಿರ್ದೇಶಕನಾಗಿ, ಪ್ರಕಾಂಡ ವಾಗ್ಮಿಯಾಗಿ ಪು.ಲ. ತನ್ನ ಜನತೆಗೆ ಸಲ್ಲಿಸಿದ ಸೇವೆ ಅಪಾರ.

''ತುಝಿ ಆಹೆ ತುಝಿ ಪಾಶ'', ''ಬಟಾಟ್ಯಾಚಿ ಚಾಳ'', ''ವ್ಯಕ್ತಿ ಆಣಿವಲ್ಲಿ'', ''ಸುಂದರ ಮಿ ಹೋಣಾರ'', ''ಗಣಗೋತ'', ''ಅಪೂರ್ವಾಯಿ'', ''ಅಸಾಮಿ ಅಸಾಮಿ'' ಇವು ಅವರ ಕೆಲವು ಶ್ರೇಷ್ಠ ಕೃತಿಗಳು. ಅವರ ಕೃತಿಗಳನ್ನು ತರತಮಗಳಲ್ಲಿ ವಿಂಗಡಿಸುವುದು ಕಠಿಣವೇ. ಆದರೂ ಪು.ಲ. ಎಂದೊಡನೆ ತಟ್ಟನೇ ಮನವನ್ನು ಅರಳಿಸುವದು ಅವರ ''ಬಟಾಟ್ಯಾಚಿ ಚಾಳ'' ಎಂಬ ಮೇರು ಹಾಸ್ಯಕೃತಿ. ''ಬಟಾಟ್ಯಾಚಿ ಚಾಳ'' ಮುಂಬಯಿಯ ಮಧ್ಯಮ ವರ್ಗದವರು ವಾಸಿಸುವ ಒಂದು ಬೃಹತ್ ಚಾಳಿನ (ಬಹುಮಹಡಿ ವಠಾರ) ಆತ್ಮ ವೃತ್ತಾಂತ.

ಅರವತ್ತು ಹಾಗೂ ಎಪ್ಪತ್ತರ ಎರಡು ದಶಕಗಳ ಕಾಲ (ಬಹುಶಃ ಆಮೇಲೂ ಕೂಡ) ಪು.ಲ. ''ಬಟಾಟ್ಯಾಚಿ ಚಾಳ''ನ್ನು ತಮ್ಮ ಏಕ ಪಾತ್ರಭಿನಯದಿಂದ ರಂಗದ ಮೇಲೆ ತಂದು ಕಿಕ್ಕಿರಿದ ಸಭಾಗೃಹದಲ್ಲಿ ನಗುವಿನ ಪ್ರಚಂಡ ಅಲೆಗಳನ್ನೇ ಎಬ್ಬಿಸುತ್ತಿದ್ದುದು, ಮನಸ್ಸಿನಲ್ಲಿ ಇಂದಿಗೂ ಹಸಿರಾಗಿದೆ, ಇವರ ಈ ಏಕಾಪಾತ್ರಭಿನಯ ಸುಮಾರು ಮುನ್ನೂರಕ್ಕೂ ಹೆಚ್ಚಿನ ಪ್ರಯೋಗಗಳನ್ನಾದರೂ ಕಂಡಿದ್ದೀತೇನೋ!

ರಂಗಪ್ರೇಮ ಮಹಾರಾಷ್ಟ್ರದ ಜನತೆಗೆ ಪರಂಪರಾಗತವಾಗಿ ಬಂದ ಬಳುವಳಿ... ಈ ಜನರ ನಾಟಕದ ಹುಚ್ಚು, ಪು.ಲ. ರವರ ''ಬಟಾಟ್ಯಾಚಿ ಚಾಳಿನ'' ವಿಷಯಕ್ಕೆ ಎಲ್ಲೆ ಮೀರಿ ಉಕ್ಕುತ್ತಿತ್ತು. ಎಲ್ಲ ಪ್ರಯೋಗಗಳೂ ತಿಂಗಳುಗಟ್ಟಲೇ ಮೊದಲೇ ''ಬುಕ್'' ಆಗಿ ''ಹೌಸ್‌ಫುಲ್'' ಆಗಿರುತ್ತಿದ್ದವು. ಬಾಲಗಂಧರ್ವರ

''ಏಕಚಪ್ಯಾಲಾ'' ಹಾಗೂ ''ಸೌಭದ್ರ''ಗಳ ನಂತರ ಮಹಾರಾಷ್ಟ್ರೀಯರನ್ನು ಇಷ್ಟೊಂದು ರಂಜಿಸಿದ ಪ್ರಯೋಗ ಇನ್ನೊಂದಿರಲಾರದು.

ಪು.ಲ. ತಮ್ಮ ಹೆಚ್ಚಿನ ಬರಹಗಳಿಗೆ ಆಯ್ದುಕೊಂಡ ಕಾಲಖಂಡ ಸ್ವಾತಂತ್ರ್ಯಾನಂತರದ ಇಪ್ಪತ್ತು ಮೂವತ್ತು ವರುಷಗಳು, ಹೆಚ್ಚುತ್ತಿರುವ ಭ್ರಷ್ಟಾಚಾರ, ಕುಸಿಯುತ್ತಿರುವ ಮೌಲ್ಯಗಳು, ಶಿಥಿಲಗೊಳ್ಳುತ್ತಿದ್ದ ನೀತಿಮತ್ತೆ, ಸಮಾಜದ ವಿಶೇಷತಃ ಸುಶಿಕ್ಷಿತ ಮಧ್ಯಮವರ್ಗದ ಆಷಾಢಭೂತಿತನ, ಇವುಗಳನ್ನೆಲ್ಲ ಚುಚ್ಚಿ, ತಿವಿದು, ಕೆಣಕಿ ಗೇಲಿ ಮಾಡುವದು ಪು.ಲ.ರ ವೈಶಿಷ್ಟ್ಯ.

ಪು.ಲ. ಗಟ್ಟಿ ಹಾಸ್ಯಕ್ಕೆ ತೀಕ್ಷ್ಣ ವ್ಯಂಗ್ಯಕ್ಕೆ ಗಾಶಿಗೊಳಿಸುವ ಚಾಟೂಕ್ತಿಗೆ ಅಂಜಿದವರಲ್ಲ. ಅಭಿರುಚಿಯ ನೆವವೊಡ್ಡಿ ದಂತಗೋಪುರವನ್ನು ಹೊಕ್ಕವರಲ್ಲ. ಒಂದು ದೃಷ್ಟಿಯಿಂದ ಮಹಾರಾಷ್ಟ್ರದ ಸಾಹಿತಿಗಳು ಆತ್ಮಗೌರವದ ಪ್ರಶ್ನೆ ಬಂದಾಗ 'ರಾಜಿ' ಮಾಡಿಕೊಂಡವರಲ್ಲ. ಪು.ಲ. ದೇಶಪಾಂಡೆ, ದುರ್ಗಾಭಾಗವತ, ವಸಂತಬಾಪಟ ಮೊದಲಾಗಿ ಅನೇಕರು ವ್ಯವಸ್ಥೆಯ ವಿರುದ್ಧ, ವ್ಯವಸ್ಥೆಯ ಅವಸ್ಥೆಯ ವಿರುದ್ಧ ಸಿಡಿದೆದ್ದು ಬೀದಿಗಿಳಿದವರೇ. ಅನಿಷ್ಟಗಳ ವಿರುದ್ಧ ಹೋರಾಡಿದವರೇ.

ಕೆಲವು ವರುಷಗಳ ಹಿಂದೆ ಪು.ಲ. ತಮಗೆ ದೊರೆತ ''ಮಹಾರಾಷ್ಟ್ರ ಭೂಷಣ'' ಪ್ರಶಸ್ತಿಯನ್ನು ಸ್ವೀಕರಿಸುತ್ತ, ''ಈಗ ನಾವು ಲೋಕಶಾಹಿಯಿಂದ ಠೋಕಶಾಹಿಯ ವರೆಗೆ ಪ್ರಗತಿ ಸಾಧಿಸಿದ್ದೇವೆ'' ಎಂದು ಆಡಿದ ವ್ಯಂಗ್ಯ ಅಂದಿನ ಮಹಾರಾಷ್ಟ್ರದ ಶಿವಸೇನಾ ಸರಕಾರವನ್ನೂ, ಶಿವಸೇನಾ ಪ್ರಮುಖ ಬಾಳ ಠಾಕ್ರೆಯವರನ್ನು ರೊಚ್ಚಿಗೆಬ್ಬಿಸಿದ್ದೂ, ಆಗ ಪು.ಲ. ಪ್ರಶಸ್ತಿಯನ್ನು ತಿರಸ್ಕರಿಸಿದ್ದೂ, ಆ ಹಿನ್ನೆಲೆಯಲ್ಲಿ ಇಡೀ ಮಹಾರಾಷ್ಟ್ರದ ಬುದ್ಧಿಜೀವಿಗಳು ಪು.ಲ.ರನ್ನು ಬೆಂಬಲಿಸಿದ್ದೂ ಇಂದು ಇತಿಹಾಸಕ್ಕೆ ಸೇರಿದ ವಿಷಯ.

ಅದೇ ರೀತಿ ಚೈನಾ ಆಕ್ರಮಣದ ಕಾಲಕ್ಕೆ ಪು.ಲ. ರಿಗೂ ಅಂದಿನ ರಕ್ಷಣಾ ಮಂತ್ರಿ ವೈ.ಬಿ. ಚವ್ಹಾನರಿಗೂ ನಡೆದ ಚಕಮಕಿಯನ್ನು ಜನ ಮರೆತಿರಲಿಕ್ಕಿಲ್ಲ. ಸಾಮಾನ್ಯವಾದ ಹಾಸ್ಯಸಾಹಿತ್ಯ, ಶ್ರೇಷ್ಠ ಸೃಹಜಶೀಲತೆಯ ಮಟ್ಟಗಳನ್ನು ಕಾಯ್ದುಕೊಳ್ಳಲಾಗದೇ ತೊಳಲಾಡಿ, ಮುಖ್ಯವಾಹಿನಿಯಿಂದ ಟಿಸಿಲೊಡೆದು ತನ್ನದೇ ಮಾರ್ಗ ಕಂಡುಕೊಂಡಿರುವುದೇ ಹೆಚ್ಚು. ಆದರೆ ಪು.ಲ. ರದು ಶ್ರೇಷ್ಠ ಹಾಸ್ಯ ಸಾಹಿತ್ಯ; ಮುಖ್ಯವಾಹಿನಿಯ ಮುಂಚೂಣಿಯಲ್ಲಿದ್ದು ಮರಾಠಿ ಹಾಸ್ಯಕ್ಕೆ ಅತಿ ಎತ್ತರದ ಸ್ಥಾನವನ್ನು ಕಲ್ಪಿಸಿಕೊಟ್ಟ ಸಾಹಿತ್ಯ.

ಅಂತೆಯೇ ಪು.ಲ. ಮಹಾರಾಷ್ಟ್ರದ ಜನಮಾನಸದಲ್ಲಿ ಸುಮಾರು ನಲವತ್ತು ವರುಷಗಳಷ್ಟು ದೀರ್ಘಕಾಲ, ಅತ್ಯಂತ ನೆಚ್ಚಿನ, ಮಮತೆಯ, ಎಲ್ಲಕ್ಕೂ ಹೆಚ್ಚಾಗಿ ಗೌರವದ ಸ್ಥಾನಗಳಿಸಿದ್ದರು, ನಮ್ಮ ಬೇಂದ್ರೆ, ಮಾಸ್ತಿ, ಕಾರಂತರ ಹಾಗೆ.

ಪು.ಲ. ತಮ್ಮ ಬರಹಗಳಿಂದ, ಏಕಪಾತ್ರಾಭಿನಯಗಳಿಂದ, ಲಕ್ಷಗಟ್ಟಲೆ ಗಳಿಸಿ ಅದೆಲ್ಲವನ್ನೂ ಮರಳಿ ಸಮಾಜಕ್ಕೇ ದಾನವಾಗಿ ಧಾರೆಯೆರೆದದ್ದು ಹೆಚ್ಚಿನವರಿಗೆ ಗೊತ್ತಿಲ್ಲದ ಸಂಗತಿ. ಪು.ಲ. ಹೆಸರು ಕೇಳಿದರೇ, ಜನರ ಮುಖ ಸಂತಸದಲ್ಲಿ ಅರಳುತ್ತಿತ್ತು. ಅವರ ಭಾಷಣವೋ. ನಾಟಕವೋ ನಾಡಿದ್ದು ಇದೆಯೆಂದರೆ ಜನ ಇಂದೇ ನಗಲು ಪ್ರಾರಂಭಿಸುತ್ತಿದ್ದರು. ಒಂದು ಕಾಲಕ್ಕೆ ಇವರಿಗಿದ್ದ 'ಸ್ಟಾರ್ - ವ್ಯಾಲ್ಯೂ' ವನ್ನು ಕಂಡು 'ಸ್ಟಾರು'ಗಳೇ ಕರುಬಿದ್ದೂ ಉಂಟು.

ಪು.ಲ. ಶ್ರೀರಂಗರ ಜತೆಗೆ ಆಗೀಗ ರಾ.ಶಿ.ಯವರ ಮನೆಯಲ್ಲಿ ಆತಿಥ್ಯ ಸ್ವೀಕರಿಸಿ ನಕ್ಕು ನಲಿದದ್ದು, ಬೇಂದ್ರೆಯವರ ಕವಿತಾವಾಚನಕ್ಕೆ ಮುಗ್ಧರಾದದ್ದು, ಕಾರಂತರನ್ನು ಈ ಯುಗದ ಭಾರತದ ಶ್ರೇಷ್ಠ ಸಾಹಿತಿ ಎಂದು ಮೆಚ್ಚಿಕೊಂಡದ್ದು, ಮಾಸ್ತಿಯವರ ಆಶೀರ್ವಾದದಿಂದ ಪುಳಕಗೊಂಡದ್ದು, ಮಲ್ಲಿಕಾರ್ಜುನ ಮನ್ಸೂರರ ಬಳಿ ಗಂಟೆಗಟ್ಟಲೆ ಸಂಗೀತ ವಿಷಯ ಚರ್ಚಿಸುತ್ತಿದ್ದದ್ದು, ಗಂಗೂಬಾಯಿ ಹಾಗೂ ಕುಮಾರ ಗಂಧರ್ವರ ಸಂಗೀತ ಎಲ್ಲೇ ಏರ್ಪಾಟಾಗಿದ್ದರೂ ಅಲ್ಲಿ ಹೋಗಿ ಕೇಳಿ ತಲೆದೂಗಿದ್ದು, ಭೀಮಸೇನ ಜೋಷಿಯ ಜತೆಗಿನ ಸ್ನೇಹಕ್ಕೆ ಹೆಮ್ಮೆ ಪಟ್ಟುಕೊಳ್ಳುತ್ತಿದ್ದದು, ಇವೆಲ್ಲ ಅವರು ಕನ್ನಡದ ಜತೆಗೆ ಹೊಂದಿದ ಮಧುರ ಬಾಂಧವ್ಯಕ್ಕೆ ಸಾಕ್ಷಿ.

ಪು.ಲ. ಇನ್ನಿಲ್ಲ. ಆದರೆ ಅವರು ತಾವು ಸೃಷ್ಟಿಸಿದ ಹಾಸ್ಯದ ಜತೆಜತೆಗೇ ಬೆರೆತುಕೊಂಡು ಚಿರಾಯುವಾಗಿದ್ದಾರೆ.

ಕೆಲವು ದಿನಚರಿಗಳು

ಭಾನುವಾದ: ಶ್ರೀನಿವಾಸ ವೈದ್ಯ

(ಪು.ಲ.ರ "ಬಟಾಟ್ಯಾಚಿ ಚಾಳ್" ಕೃತಿಯಲ್ಲಿನ "ಕೆಲವು ದಿನಚರಿಗಳು" ಎಂಬ ಪ್ರಕರಣದ, ಒಂದೆರಡು ಆಯ್ದ ತುಣುಕುಗಳನ್ನು ಇಲ್ಲಿ ಭಾಷಾಂತರ ಗೈಯಲು ಯತ್ನಿಸಿದ್ದೇನೆ. ಎಷ್ಟೇ ಸಮರ್ಥ ಭಾಷಾಂತರವಾದರೂ ಒಂದು ಭಾಷಿತರ ಸಂಸ್ಕೃತಿಯನ್ನು ಇನ್ನೊಂದು ಭಾಷಿತರಿಗೆ ಸಹಜವಾಗಿ ಅರ್ಥವಾಗುವಂತೆ ತರ್ಜುಮೆಗೈಯುವುದು ಕಷ್ಟದ ಕೆಲಸ. ಒಂದು ಭಾಷೆಯ ಹಾಸ್ಯವನ್ನು ಇನ್ನೊಂದು ಭಾಷೆಗೆ ಭಟ್ಟಿ ಇಳಿಸುವದಂತೂ ಇನ್ನೂ ಕಟ್ಟದ ಕೆಲಸ. ಇಂತಹ ಇತಿಮಿತಿಗಳ ಅರಿವಿದ್ದೂ ಪು.ಲ. ರಿಗೆ ಶ್ರದ್ಧಾಂಜಲಿ ಅರ್ಪಿಸುವ ಭಾವದಿಂದ ಈ ದುಸ್ಸಾಹಸಕ್ಕೆ ಕೈ ಹಾಕಿದ್ದೇನೆ.

ಇದನ್ನು ಭಾಷಾಂತರವೆನ್ನುವದಕ್ಕಿಂತಲೂ ಸ್ಥೂಲವಾದ ಸ್ವೇಚ್ಛಾಭಾವಾನುವಾದವೆಂದರೆ ಸರಿಹೋದಿತೇನೋ!)

''ದಿನವೊಂದರಲ್ಲಿ ಏನನ್ನಾದರೂ ಬರೆಯಬೇಕು'' ಎಂಬ ಸಮರ್ಥ ರಾಮದಾಸರ ಮನೋಪದೇಶವನ್ನು ಬಟಾಟಾಚಾಳನ ಚಾಳಸ್ಥರು ಎಷ್ಟೊಂದು ನಿಷ್ಠೆಯಿಂದ ಆಚರಿಸುತ್ತಿದ್ದರೆಂಬುದನ್ನು ಅಲ್ಲಿನ ಕೆಲವರ ದಿನಚರಿಗಳನ್ನು ಓದಿಯೇ ತಿಳಿಯಬೇಕು. ''ದಿನಚರಿ ಎಂದರೆ ಮನದ ಕನ್ನಡಿ... ದಿನನಿತ್ಯ ದಿನಚರಿ ಎಂಬ ಕನ್ನಡಿಯಲ್ಲಿ ನಮ್ಮ ಮನದ ಪ್ರತಿಬಿಂಬ ಬಿಂಬಿಸಲೇ ಬೇಕು'' ಎಂಬ ಆಚಾರ್ಯ ಬಾಬಾ ಬರ್ವೆಯವರ ಸಂದೇಶವನ್ನು ಬಟಾಟಾಚಾಳಿನ ಅವರ ಅನುಯಾಯಿಗಳೆಲ್ಲ ಹೇಗಾದರೂ ಮಾಡಿ ಅನುಷ್ಠಾನಕ್ಕೆ ತರಲು ನಿಶ್ಚಯಿಸಿದರು.

ಸ್ವತಃ ಬಾಬಾ ಬರ್ವೆಯವರೇ ಸ್ವಾವಲಂಬನ ತತ್ವಕ್ಕೆ ಎಷ್ಟೊಂದು ನಿಷ್ಠೆಯಿಂದ ಅಂಟಿಕೊಂಡಿದ್ದರೆಂದರೆ, ಅವರು ಸ್ವಂತ ಕೈಯಿಂದ ಹೊಲಿದ ದಿನಚರಿಯ ವಹಿಯಲ್ಲಿ, ಸ್ವಂತ ಕೈಯಿಂದ ಇದ್ದಿಲು ಕುಟ್ಟಿ ತಯಾರಿಸಿದ ಮಶಿಯಿಂದ, ಸ್ವಂತ ಕೈಯಿಂದ ಕೆತ್ತಿದ ಗಲುಗಿನ ಅಲುಗಿನಿಂದ, ತಮ್ಮ ಸ್ವಂತ ದಿನಚರಿಯನ್ನು ಸ್ವತಃ ತಾವೇ ಬರೆಯುತ್ತಿದ್ದರು. ನಿಜ ಹೇಳಬೇಕೆಂದರೆ ಆಚಾರ್ಯರ ದಿನಚರಿಯ ಮೂರುನೂರಾ ಅರವತ್ತೈದು ಪುಟಗಳನ್ನೂ ಇಲ್ಲಿ ಕೊಡುವ ಮೋಹವನ್ನು ನಿಗ್ರಹಿಸುವದು ಕಷ್ಟದ ಕೆಲಸವೇ! ಆದರೂ ''ಸಂಯಮದ ಬ್ರೇಕ್ ಇಲ್ಲದೇ ಜೀವನದ ಗಾಡಿ ಓಡದು'' ಎಂಬ ಆಚಾರ್ಯರ ಸೂತ್ರವನ್ನೇ ನೆನೆದು, ಇಲ್ಲಿ ಕೆಲವೇ ಪುಟಗಳನ್ನು ನಿದರ್ಶನರೂಪದಿಂದ ಕೊಡಲಾಗಿದೆ.

ಜನವರಿ - 1 ಇವತ್ತು ಹೊಸ ವರುಷದ ಮೊದಲ ದಿನ! ಜೀವನದ ಅಯಿವತ್ತೈದು ಪುಟಗಳನ್ನು ತಿರುವಿದೆ. ಯಾವುದೇ ಪುಟವನ್ನು ಮುಗುಚುವಾಗಲೂ ಬೆರಳಿಗೆ ಅಸತ್ಯದ, ಅಮಂಗಳ ವಿಚಾರಗಳ ಎಂಜಲು ನೆಕ್ಕಿಸಿ ಪುಟ ಮುಗುಚುವ ಪ್ರಸಂಗ ಬರಲಿಲ್ಲ. ಇದಕ್ಕಾಗಿ ಜಗನ್ನಿಯಾಮಕನಿಗೆ ಲಕ್ಷ ಲಕ್ಷ ಪ್ರಣಾಮಗಳು.... ಸಂತ ಕಬೀರಜೀ ಹೇಳುತ್ತಾರೆ ''ಹೇ ಮೂರಖ ಮನಕೋಲಗಾಮ ಡಾಲೋ'' ನಾನು ನನ್ನ ಮನಕ್ಕೆ ಲಗಾಮು ಹಾಕಲು ಶಕ್ತನಾಗಿದ್ದೇನೆಯೇ? ಇಲ್ಲ, ಇಲ್ಲ, ಇಲ್ಲ! ತುಕಾರಾಮ ಮಹಾರಾಜ ಹೇಳುತ್ತಾರೆ ''ಹೇ ನೇತ್ರಗಳೇ ಪಾಪವಾಸನೆಯನ್ನು ತೋರಿಸಬೇಡಿರಿ'' ನನ್ನ ಕಣ್ಣುಗಳ ಪಾಪವಾಸನೆ ಇನ್ನೂ ಹಿಂಗಿಲ್ಲ. ತಾತ್ಪರ್ಯ ಮನಸ್ಸು ಶುದ್ಧ ಇರಬೇಕು.

ಇವತ್ತು ಬೆಳಗ್ಗೆ ಎಂದಿಗಿಂತ ಕಾಲುಗಂಟೆ ಹೆಚ್ಚಾಗಿಯೇ ಪ್ರಾರ್ಥನೆ ಮಾಡಿದೆ. ಆಮೇಲೆ ಮುಕ್ತ ಕಂಠದಿಂದ ನರಸೈಯ್ಯನ ಭಜನೆ ಹಾಡುತ್ತಿದ್ದೆ. ಪಕ್ಕದ ಮನೆಯ ಶಂಭೂರಾವ ಗಾಯತೊಂಡೇನ ನಿದ್ದೆ ಕೆಟ್ಟಿತೆಂದು ಅವ ಝುಗಳಕ್ಕೇ ಬಂದ. ಶಂಭೂರಾಯನಿಗೆ ತನ್ನ ಕ್ರೋಧವನ್ನು ನಿಯಂತ್ರಿಸಲು ಆಗಲೇ ಇಲ್ಲ.

ಅವನ ಮನಃಪರಿವರ್ತನೆಗೆ ಸಾಕಷ್ಟು ಪ್ರಯತ್ನಿಸಿದೆ. ಆದರೂ ಕೋಪದಲ್ಲಿ ಅವ ನನ್ನನ್ನು ಅಪಶಬ್ದಗಳಿಂದ ನಿಂದಿಸಿದ. ಆಗ ನನ್ನ ಚಿರಂಜೀವ ನಾರೂ (ನಾರಾಯಣ) ಶಂಭೂರಾಯನ ವದನಕ್ಕೆ ಇಕ್ಕರಿಸಿದ. ನಾರೂ ಶಂಭೂರಾಯನಿಗೆ ಇಕ್ಕರಿಸಬಾರದಿತ್ತು. ಚಿ. ನಾರೂನ ಹಿಂಸಾಪ್ರವೃತ್ತಿಯ ಪ್ರಾಯಶ್ಚಿತ್ತವೆಂದು ನಿತ್ಯದ ಒಂದೂವರೆ ಕಪ್ ಹಸುವಿನ ಹಾಲಿನ ಬದಲಿಗೆ ಒಂದೇ ಕಪ್ ಹಾಲು ಕುಡಿದೆ... ಹತ್ತು ಗಂಟೆಗೆ ಸ್ವಲ್ಪ ದ್ರಾಕ್ಷಿ ಬಾದಾಮುಗಳನ್ನು ತಿಂದೆ. ರಾತ್ರಿ ಮಲಗುವಾಗ ಆಯುರ್ವೇದೀಯ ಔಷಧಿ ಸೋನಾಮುಖಿ ತೆಕ್ಕೊಂಡೆ. ಸೋನಾಮುಖಿ ಅಂತಃಶುದ್ಧಿಗೆ ಒಳ್ಳೆಯದು... ಮಕ್ಕಳು ವಿದೇಶೀ ಔಷಧಿ ತಕ್ಕೊಳ್ಳುತ್ತಾರೆ. ಅವರ ಮನಃಪರಿವರ್ತನೆ ಮಾಡಲೇಬೇಕು.

ಜನವರಿ - 15 ..... ವಠಾರದಲ್ಲಿನ ಹಿಂಸಾತ್ಮಕ ಪ್ರವೃತ್ತಿ ಮತ್ತು ಅಸತ್ಯಾಚರಣೆ ಬೆಳೆಯುತ್ತಲೇ ನಡೆದಿದೆ. ಮಕ್ಕಳು ಒಬ್ಬರಿಗೊಬ್ಬರು ಅಪಶಬ್ದಗಳಲ್ಲಿ ಬಯ್ದಾಡುತ್ತಾರೆ. ನಲ್ಲಿಯ ಮೇಲೆ ಭಗಿನಿಯರ ಕಿತ್ತಾಟ ಕಿರುಚಾಟ ನಡೆದೇ ಇರುತ್ತದೆ. ವಾಸ್ತವಿಕವಾಗಿ ನೀರು ಎಂದರೆ ಜೀವನವಲ್ಲವೇ! ಇಂತಹ ಜೀವನರೂಪಿ ಜಲವನ್ನು ತರುವ ನಲ್ಲಿಗೆ ನನ್ನ ವಂದನೆಗಳು... ಆದರೆ ಶ್ರೀ ಅಣ್ಣಾಪಾವನೆಯವರ ಮನೆಯಾಕೆ ಬೇಕು ಬೇಕೆಂತಲೇ ನಮ್ಮ ಮನೆಯಾಕೆಯ ಕಾಲಮೇಲೆ ತಪ್ಪೇಲಿ ಅಪ್ಪಳಿಸಿದ್ದು ಸರಿಯೇ? ಮೊದಲು ನಮ್ಮಾಕೆಯ ಕೈಯಿಂದ ಜಲರೂಪಿ ಜೀವನ ತುಂಬಿದ ತಪ್ಪೇಲಿ ಕೈತಪ್ಪಿ ಅಣ್ಣಾಪಾವಸೆನ ಮನೆಯಾಕೆಯ ಕಾಲಮೇಲೆ ಬಿದ್ದದ್ದು ಸುಳ್ಳಲ್ಲ... ಆದರೂ.....

ಮನುಷ್ಯ ಸ್ಖಲನಶೀಲನಿದ್ದಾನೆಂಬದು ನಮ್ಮ ಭಗಿನಿಯರಿಗೆ ಎಂದು ತಿಳಿದೀತೋ? ನಮ್ಮಾಕೆ ಸೇಡಿನ ಮಾತಾಡುತ್ತಾಳೆ. ಇವರೆಲ್ಲರ ಮನಃಪರಿವರ್ತನೆಯ ಪ್ರಯತ್ನ ಮಾಡಲೇಬೇಕು.

ಏಪ್ರಿಲ್ 1... ಇವೊತ್ತು ನನ್ನ ಹಿರಿಯಮಗ ಚಿ. ನಾರೂನ ಮೂರನೇ ಮಗುವಿನ ನಾಮಕರಣದ ದಿನ. ಶ್ರೀಮತಿ ಜೋಗದಂಡೆ, ನಮ್ಮ ಸೊಸೆಯ ಉಡಿ ತುಂಬುವ ನೆವದಲ್ಲಿ ಒಂದು ಖಣ ಹಾಗೂ ಎರಡು ರೂಪಾಯಿಗಳ ನಾಣ್ಯ ಹಾಕಿದರು. ಎರಡೂ ಖೊಟ್ಟಿ ನಾಣ್ಯಗಳು!

ನಮ್ಮ ಸಮಗ್ರ ಸಾಮಾಜಿಕ ಜೀವನಕ್ಕೇನೇ ಅಸತ್ಯದ ಹುಳು ಹಿಡಿದಿದೆ. ಈ ಹುಳವನ್ನು ಪ್ರೇಮದಿಂದ ದೂರಮಾಡಬೇಕು. ಅನಾಸಕ್ತಿಯನ್ನು ಬೆಳೆಸಿಕೊಳ್ಳುವವರೆಗೆ ಈ ಕಾರ್ಯವಾಗದು. ದಾನಧರ್ಮಗಳ ಭಾವನೆ ಬೆಳೆಯಬೇಕು. ಕುಷ್ಠಸೇವಾ ಸಂಘಕ್ಕೆ ಎರಡು ರೂಪಾಯಿಗಳ ಸಂಪತ್ತಿ ದಾನ ಮಾಡಿದೆ.

ಜುಲೈ - ೮ ... ಚಿ. ನಾರೂನಿಗೆ ಇವತ್ತು ಕೆಲಸದಲ್ಲಿ ಬಡತಿ ಸಿಕ್ಕಿತು. ಅವನ ಮಾಸಿಕ ಉತ್ಪನ್ನ ಈಗ ಅಯಿದು ನೂರಾ ಅರವತ್ತು ರೂಪಾಯಿಗಳಿಗೇರಿತು. ಅದಕ್ಕಾಗಿ ಬೆಳಿಗ್ಗೆ ನಾವೆಲ್ಲ ಸಾಮುದಾಯಿಕ ಪ್ರಾರ್ಥನೆ ಮಾಡಿದೆವು.

ದಯಾಮಯನಾದ ಪರಮೇಶ್ವರನ ಕೃಪೆಯಿಂದ, ಚಿ. ನಾರೂನ ಹೆಡ್‌ಕ್ಲರ್ಕನು ದುಡ್ಡು ತಿಂದ ಆಪಾದನೆಯ ಮೇಲೆ ಡಿಸ್‌ಮಿಸ್ ಆದ. ಹಾಗೂ ಅವನ ಜಾಗ ಚಿ. ನಾರೂನಿಗೆ ದಕ್ಕಿತು. ಪರಮೇಶ್ವರನ ಕೃಪೆಯಿಂದ ಏನೆಲ್ಲ ಆದದ್ದು ಒಳ್ಳೆಯದಕ್ಕೇ ಆಗುತ್ತದೆ.

ಬೆಳಿಗ್ಗೆ ಡಿಸ್‌ಮಿಸ್ ಆದ ಹೆಡ್‌ಕ್ಲರ್ಕ ಬಂದು ''ನೀವು ನನ್ನ ಬೆನ್ನಲ್ಲಿ ಚೂರಿ ಇಕ್ಕಿದಿರಿ'' ಇತ್ಯಾದಿಯಾಗಿ ಚಿ. ನಾರೂನಿಗೆ ಸಿಕ್ಕಾಬಟ್ಟೆ ಬಯ್ದು ಹೋದ. ಆಗ ಚಿ. ನಾರೂ ಉತ್ತಮ ಮನಃಶಾಂತಿಯನ್ನು ತೋರಿದ.

.... ಮಗಳು ಕುಸುಮಿಗೆ ಎಷ್ಟು ಹೇಳಿದರೂ ಯಾವಾಗಲೂ ಪ್ರೇಮಗೀತೆಗಳನ್ನು ಹಾಡುತ್ತಿರುತ್ತಾಳೆ. ಹೊಸ ಪೀಳಿಗೆಯ ಗತಿ ಏನಾದೀತೋ?

ಡಿಸೆಂಬರ್ - 31 ಶ್ರೀ ಸಮೇಳ ಕಾಕಾ ಅವರ ಮಗಳು ಹಾಗೂ ದ್ವಾರಕಾನಾಥ ಗುಪ್ತೆಯವರ ಮಗ ಇಬ್ಬರೂ ನಾಪತ್ತೆಯಾಗಿದ್ದಾರೆ. ಹೊಸ ಪೀಳಿಗೆಯ ಎದುರು ಯಾವದೇ ಧ್ಯೇಯವಾದವಿಲ್ಲ. ಜಗವೆಲ್ಲ ಭೋಗವಾದದೆಡೆಗೆ ನಡೆದಿದೆ... ಆ ಪರಮೇಶ್ವರ ಎಲ್ಲರ ಆತ್ಮಕ್ಕೂ ಶಾಂತಿ ಈಯಲಿ.

★★★

ಆಚಾರ್ಯ ಬರ್ವೆಯವರ ಅನುಯಯಿ ಯುವಸಾಹಿತಿ ಮ್ಹಾಳಸಕಾಂತ ಪೊಂಬುರ್ಲೇಕರರ ಕೆಲವು ದಿನಚರಿಗಳು

ಆಗಸ್ಟ್ - 8 ಇವತ್ತು ಬೆಳಿಗ್ಗೆ ಎದ್ದೆ. ಗ್ಯಾಲರಿಗೆ ಬಂದೆ. ಎದುರು ''ಆಕೆ'' ನಿಂತಿದ್ದಳು. ''ಆಕೆಯ'' ದರ್ಶನ ಮಾತ್ರದಿಂದಲೇ ಈ ದಿನದ ಶುಭಾರಂಭವಾಯಿತೆಂದುಕೊಂಡೆ. ''ಪ್ರೇಮದಾಕ್ಷಣವೊಂದು'' ಎಂಬ ಕವಿವಾಣಿ ಸಹಜವಾಗಿಯೇ ಬಾಯಿಗೆ ಬಂತು. ಗುಣುಗುಣಿಸಿದೆ. ಎದುರು ನಲ್ಲಿಯ ಬಳಿ ನಡೆದಿದ್ದ ರಮಾ ಕಕ್ಕಿಗೆ ಏನೋ ತಪ್ಪುಕಲ್ಪನೆ ಆಯಿತೆಂದು ತೋರುತ್ತದೆ. ಅವರು ನನ್ನ ಕಡೆ ದುರುಗುಟ್ಟಿ ನೋಡುತ್ತ ''ಲಗ್ನಾ ಯಾಕ ಮಾಡಿಕೊಂಬೋದಿಲ್ಲೋ... ಮುಂಡೇಗಂಡ'' ಎಂದು ಬಯ್ದರು. ಮನನೊಂದಿತು. ನೊಂದುಕೊಂಡೆ. ನನ್ನ ಹೃದಯ ಗಟ್ಟಿಯಾಗಿದೆಯೇ....

ಓಹ್... ಓಹ್... ಸ್ಪಂದನ... ಸ್ಪಂದನ... ಸ್ಪಂದನ. ''ಆಕೆ'' ಕೇವಲ ಒಮ್ಮೆ ಮಾತ್ರ ನನ್ನೆಡೆ ನೋಡಿ ಮುಗುಳ್ನಗೆ ತೂರಿ ಒಳಗೆ ಹೋದಳು.

ನಾನೂ ಒಳಗೆ ಬಂದು ಹೊಸ ಕಾದಂಬರಿ ಬರೆಯಲು ಕೈಗೆತ್ತಿಕೊಂಡೆ. ''ಬೆಳಗಿನ ಜಾವದ ಬೆಳಗು''

ಸೆಪ್ಟೆಂಬರ್ - 11 ... ''ಹಾಯ್''....

ನವೆಂಬರ್ - 30 ಎಡಗೈ ಮುರಿದಂತೆ ಕಾಣುತ್ತದೆ. ಮುಂದಿನ ಎರಡೂ ಹಲ್ಲುಗಳು ಅಲುಗಾಡುತ್ತವೆ. ''ಆಕೆ''ಯ ತಂದೆ ಅಣ್ಣಾಪಾವಸೆ ಸುಮ್ಮನೇ ''ಇಲ್ಲ... ಆಗುವದಿಲ್ಲ'' ಎನ್ನಬಹುದಿತ್ತು. ಹೊಡೆದಾಟಕ್ಕೆ ಇಳಿಯುವ ಕಾರಣವಿರಲಿಲ್ಲ.

''ಆಕೆಯ''ಯ ಕಣ್ಣಿನ ಕಂಬನಿ ಮನಕ್ಕೆ ಧೈರ್ಯ ತುಂಬುತ್ತಿದೆ.

ಡಿಸೆಂಬರ್ - 12 ಎಂಟು ದಿವಸದ ಹಿಂದೆ ನನ್ನ ಊರು ಪೊಂಬುರ್ಲೇಗೆ ಬಂದು ಸರಕಾರೀ ಹಾಸ್ಪಿಟಲ್‌ದಲ್ಲಿ ಅಡ್ಮಿಟ್ ಆಗಿದ್ದೇನೆ. ಪ್ರೇಮದ ಮಹತಿ ಈ ಜಗತ್ತಿಗೆ ಎಂದು ತಿಳಿದೀತು?

''ಆಕೆ'' ಯಿಂದ ಒಂದೂ ಕಾಗದ ಬಂದಿಲ್ಲ... ಆತ್ಮಹತ್ಯೆಯ ವಿಚಾರ ತಲೆ ತಿನ್ನುತ್ತಿದೆ.

ಜನವರಿ - 1 ಇನ್ನೂ ಆಸ್ಪತ್ರೆಯಲ್ಲೇ ಇದ್ದೇನೆ... ಸಿಸ್ಟರ್ ಚಂದ್ರಾಬಾಯಿಯ ನಗೆಯಲ್ಲಿ ಬೆಳದಿಂಗಳಿನ ಮಾದಕತೆ ಇದೆ.

★★★

ಅಣ್ಣಾಪಾವಸೆಯವರ ದಿನಚರಿಗಳು

ಜನವರಿ - 14 ಹೆಡ್‌ಕ್ಲರ್ಕ ಡಿಸಪ್ಯಾಚ್‌ಕ್ಲರ್ಕ ದೀಕ್ಷಿತಗ ಝಾಡಿಸಿಬಿಟ್ಟ. ಅಯ್ಯಂಗಾರ ಸಾಹೇಬಗ ಮತ್ತು ಬಾಳಿಗಾನಿಗೆ ಭೋಲೋ ದೋಸ್ತಿ ಇದ್ದಂಗ ಕಾಣಸ್ತದ... ಏನs ಇರಲಿ ಬಾಳಿಗಾನಿಗೆ ಬಟಾಟಾವಡಾ ತಿನ್ನಿಸಕೋತ ಇರಬೇಕು.

ಜನವರಿ - 16 ಇವತ್ತು ಧೋಂಡ್ಯಾ ಗೋಖಲೇ ಅರ್ಧತಾಸು ತಡಾಮಾಡಿ ಬಂದ

ಜನವರಿ - 19 ಹೆಡ್‌ಕ್ಲರ್ಕ ಹಜಾಮ ಇದ್ದಾನ.

ಮಾರ್ಚ್ - 30 ಅಯ್ಯಂಗಾರ ಸಾಹೇಬಗ ವರ್ಗ ಆತು. ಇನ್ನ ಬಾಳಿಗಾನ್ನ ಯಾರೂ ಕೇಳವರ ಇಲ್ಲ.

ಏಪ್ರಿಲ್ - 1 ಇವತ್ತ ಆಚಾರ್ಯ ಬಾಬಾ ಬರ್ವ್ಯಾನ ಮೊಮ್ಮಗನ ನಾಮಕರಣ ಇತ್ತು... ನಿಷ್ಕಾರಣ ದುಡ್ಡು ದಂಡ! ಬರ್ವ್ಯಾ ಕಳ್ಳ ಇದ್ದಾನ... ಅವನ ಹೆಂಡತಿ ಕಳ್ಳಿ... ಮಗ ನಾರ್ಯಾ ದುಡ್ಡ ತಿಂತಾನ.

ಏಪ್ರಿಲ್ - 5 ನನ್ನ ಮಗಳು ನಮ್ಮ ಮಾರಿಗೆ ಡಾಂಬರ ಬಳೀತಾಳ.... ಒಮ್ಮೆ ಆ ಲಫಂಗ ಪೋಂಬುರ್ಲೇಕರನ ಎಲಬು ಮೆತ್ತಗ ಮಾಡಬೇಕು.

ಡಿಸೆಂಬರ್ - 1 ಸಮೇಳಕಾಕಾನ ಮಗಳು ರತನ ದ್ವಾರಕಾನಾಥ ಗೂಪ್ತೇನ ಮಗನ ಸಂಗ್ತೀ ಓಡಿ ಹೋಗ್ಯಾಳ... ನಮ್ಮ ಮಕ್ಕಳನ್ನು ಸಂಭಾಳಿಸಬೇಕು.

★★★

ಬಟಾಟಾಚಾಳಿನ ಇನ್ನೊಬ್ಬ ಗೃಹಸ್ಥ ರಾವಳನಾಥ ಕಾಮತರ ಕನ್ನಡಿ

ಜನವರಿ - 1 ಆಫೀಸಿನಲ್ಲಿ 'ಡಾಯರೀ' ಸಿಕ್ಕಿತು... ಅದರ ಮ್ಯಾಲ ಕುಲಕರ್ಣೀ ಕಣ್ಣಿತ್ತು. ಅವಗ ಹಚ್ಚಗೊಡದS ನಾನೇ ತಂದೆ.... ಆದರೆ ಈ ಡಾಯರಿಯೊಳಗೆ ಏನು ಬರೀಬೇಕು ಎನ್ನುವದೇ ದೊಡ್ಡಪ್ರಶ್ನೆ... ಇವತ್ತ ಇಡೀ ದಿವ್ಸ ಏನೂ ಆಗೇ ಇಲ್ಲ... ಏನಿಲ್ಲಂದರೂ ಜನೋಬಾ ರೇಗೆ ನಮ್ಮ ಸೆಕ್ಷನ್‌ಕ್ಕೆ ಬಂದು ಚಹಾ ಕುಡದ ಹೋದ.

ಫೆಬ್ರವರಿ - 5 ಬೆಳಿಗ್ಗೆ ಎದ್ದೆ. ಸ್ನಾನ ಮಾಡಿದೆ. ಊಟ ಮಾಡಿದೆ, ಆಫೀಸಿಗೆ ಹೋದೆ, ಮರಳಿ ಬಂದೆ, ಟ್ರ್ಯಾಮಕಂಡಕ್ಟರ ಟಿಕೇಟು ಕೇಳಲಿಕ್ಕೆ ಮರೆತುಬಿಟ್ಟ, ರಾತ್ರಿ ಮತ್ತೆ ಉಂಡು ಮಲಗಿದೆ.

ಮಾರ್ಚ್ - 9 ಇವೊತ್ತು ನಮ್ಮ ಕಂಪನಿ ಡಾಯರೆಕ್ಟರ್ ಇಂಗ್ಲಂಡಿದಾಗ ಸತ್ತ. ಸೂಟಿ ಕೊಟ್ಟಿದ್ದರು. ಮೊದಲೇ ತಿಳಿದಿದ್ದರೆ ಇಷ್ಟು ಧಡಪಡಿಸಿಕೊಂಡು ಆಫೀಸಿಗೆ ಹೋಗೋ ತ್ರಾಸು ತಪ್ಪತಿತ್ತು. ಹನ್ನೊಂದು ಗಂಟೆಗೆ ಮನೆಗೆ ಬಂದೆ. ಇವಳು ದಾದರಕ್ಕೆ ತನ್ನ ಮಾವಶೀ ಮನಿಗೆ ಹೋದದ್ದನ್ನ ಪಕ್ಕದ ಮನೆಯ ಗುಪ್ತೇನ ಹೆಂಡತಿ ಹೇಳಿದಳು. ಮಕ್ಕಳು ಶಾಲೆಗೆ ಹೋಗಿದ್ದರು. ಬಾಗಲಕ್ಕ ಕೀಲಿ. ಇಡೀ ಚಾಳಿನ್ಯಾಗ ಒಬ್ಬನೇ ಒಬ್ಬ ಗಂಡಸು ಇದ್ದಿದ್ದಿಲ್ಲ. ಹಾಗೇಂತ ಮರಳಿ ಆಫೀಸಿಗೆ ಬಂದೆ. ಚಪರಾಶಿಗಳೆಲ್ಲ ಇಸ್ಪೇಟ ಆಡಿಕೋತ

ಕೂತಿದ್ದರು. ಅವರ ಪೈಕಿ ಒಬ್ಬನ್ನ ಎಬ್ಬಿಸಿ ಅವನ ಜಾಗಾಕ್ಕೆ ನಾ ಕೂತು ಆರುಗಂಟೆಯವರೆಗೆ ಇಸ್ಪೀಟ ಆಡಿದೆ. ರಾತ್ರಿ ಚೆನ್ನಾಗಿ ನಿದ್ದೆ ಬಂತು.

ಅಕ್ಟೋಬರ್ - 15 ಸದಾಶಿವ ಗಲ್ಲಿಯೊಳಗಿನ ದಾಜಿ ವಾಲಾವಾಲಕರ ತೀರಿಕೊಂಡ ಅಂತ ಸುದ್ದಿ ಬಂತು. ಆಫೀಸಿಗೆ ಲೀವ್ನೋಟ ಕಳಿಸಿದೆ. ಆಮ್ಯಾಲ ಕೇಳಿದರ ಈ ದಾಜಿ ವಾಲಾವಾಲಕರ ಅವ ಅಲ್ಲ ಬ್ಯಾರೇ ಅಂತ ತಿಳೀತು. ಹಂಗಾಗಿ ಮರಳಿ ಬಂದು ಮಲಗಿದೆ. ನಾ ಹರಿಶ್ಚಂದ್ರ ಘಾಟಕ್ಕೆ ಹೋಗಿರಲಿಲ್ಲ. ಆದರೂ ಹೆಂಡತಿ ತಲೀಮ್ಯಾಲ ಸ್ನಾನಕ್ಕೆ ಹಾಕಿದಳು.

ಅಕ್ಟೋಬರ್ - 16 ಥಂಡಿ ಆಗಿದೆ... ಆಫೀಸಿಗೆ ಸಿಕ್‌ನೋಟ ಕಳಿಸಿದೆ... ಮಧ್ಯಾನ್ಹ ಮತ್ತು ರಾತ್ರಿ ನಿದ್ದೆ.

ನವೆಂಬರ್ - 15 ಒಂದು ತಿಂಗಳ ರಜೆ ತಗೊಂಡಿದ್ದೇನೆ. ನಾಳೆ ಊರಿಗೆ - ಬೆಳಗಾವಿಗೆ - ಹೋಗಬೇಕು. ಇವತ್ತ ಇಡೀ ದಿನ ಮಲಗಿದೆ.

ಡಿಸೆಂಬರ್ - 16 ನಿನ್ನೆ ಬೆಳಗಾವಿಯಿಂದ ಬಂದೆ ಒಟ್ಟss ನೂರಾ ಏಳು ರೂಪಾಯಿ ಎಂಟ ಆಣೆ ಖರ್ಚ ಆತು. ತಿರುಗಿ ಬರಬೇಕಾದ ಎಸ್.ಟಿ. ಬಸ್‌ನ್ಯಾಗ ನನ್ನ ಮಗ ಮಂಗೇಶನ್ನ ತೊಡೀ ಮ್ಯಾಲ ಕೂಡ್ರಿಸಿಕೊಂಡು ಬಂದೆ. ಹಂಗಾಗಿ ಅವನ ಟಿಕೇಟಿನ ಖರ್ಚು ಉಳೀತು. .... ತೊಡೆ ನೋಯ್ತಾ ಇದೆ... ಏಳು ದಿವ್ಸ ರಜೆ ಬೆಳೆಸಿದೆ.

ಡಿಸೆಂಬರ್ - 25 ಆಫೀಸಿನ್ಯಾಗ ಸಾಹೇಬಗ ಕಾಜೂ ಬರ್ಫಿ ಕೊಟ್ಟೆ.

ಡಿಸೆಂಬರ್ - 31 ಸಮೇಳಕಾಕಾನ ಮಗಳು ದ್ವಾರಕಾನಥ ಗುಪ್ತೇನ ಮಗನ ಸಂಗಲೇ ಓಡಿ ಹೋಗ್ಯಾಳ. ಸಮೇಳಕಾಕಾಗ ವರದಕ್ಷಿಣೆ ದುಡ್ಡು ಉಳೀತು. ಇವತ್ತ ಮಾತ್ರ ನಾಳೆ ಸೂಟಿ ಅದ. ಹೆಂಡತಿ ''ಆರೇ ಮಿಲ್ಕ ಕಾಲೋನಿ'' ತೋರಸು ಅಂತ ಬೆನ್ನ ಬಿದ್ದಾಳ, ಈ ಹೆಣ್ಣುಮಕ್ಕಳಿಗೆ ಯಮ್ಮೀ ನೋಡೋದರಾಗ ಏನ ಸುಖ ಇರತದೋ... ದೇವರಿಗೇ ಗೊತ್ತು!

★★★

ಡಾಯರಿಗೆ ದಿನಚರಿ ಎನ್ನುವ ಪರ್ಯಾಯ ಪದ ಬಳಕೆಯಲ್ಲಿ ಬರುವ ಎಷ್ಟೋ ಮೊದಲು ಬರೆದ ಕೆಲವು ದಿನಚರಿಯ ಪುಟಗಳಿವು.

(ವಿ.ಸೂ.: ಪು.ಲ. ದೇಶಪಾಂಡೆಯವರ ತಾಯಿ ಕಾರವಾರದವರು, ಅಲ್ಲದೇ ಪು.ಲ. ಕೂಡ ತಮ್ಮ ಜೀವನದ ಪ್ರಾರಂಭಿಕ ವರುಷಗಳಲ್ಲಿ ಬೆಳಗಾವಿಯ ಆರ್.ಪಿ.ಡಿ. ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯಲ್ಲಿದ್ದವರು. ಕಾರವಾರ ಹಾಗೂ ಬೆಳಗಾವ್ ಎರಡೂ ಜಿಲ್ಲೆಗಳು ಈಗಲೂ ಕರ್ನಾಟಕದಲ್ಲಿವೆ.)

ಶಿವಾನುಭವ!

– ಹೆಚ್. ಗೋಪಾಲಕೃಷ್ಣ

ನಮ್ಮ ಹಿರಿಯ ಅಧಿಕಾರಿಗಳಾಗಿದ್ದ ಶಿವಣ್ಣನವರ ಪರಿಚಯ ನಿಮಗೆ ಮಾಡಿಸಿದ ನೆನಪು ನನಗಿಲ್ಲ. ಆದರೆ ಶಿವಣ್ಣನವರನ್ನು ನೀವು ನೋಡಿ, ಕೇಳಿ ಇರುತ್ತೀರ ಅಂಬೋ ನಂಬಿಕೆ ಇದೆ. ಈ ನಂಬಿಕೆ ಹೇಗೆ ಅಂದರೆ ನಮ್ಮಲ್ಲಿ ನಿಮ್ಮಲ್ಲಿ ಎಲ್ಲರಲ್ಲೂ ಶಿವಣ್ಣನವರು ಇರುವುದರಿಂದ.

ಶಿವಣ್ಣನವರು ನಮ್ಮ ಕಾರ್ಖಾನೆಗೆ ಬಂದ ಹೊಸದರಲ್ಲಿ ಅವರಿಗೆ ಅವರ ಆಗಿನ ಹಿರಿಯ ಅಧಿಕಾರಿಗಳು ಒಂದು ಉಪದೇಶವನ್ನು ನೀಡಿದ್ದರಂತೆ. ಯಾವಾಗಲೂ ಕೆಳಗಿನವರು ಮಾಡಿದ ಕೆಲಸವನ್ನ ಮೆಚ್ಚುತ್ತೀರಿ ಅಂತ. ಕೆಳಗಿನವರು ಮಾಡಿದ ಕೆಲಸವನ್ನು ಮೆಚ್ಚಲೇಬೇಕು ಅಂತ ಶಿವಣ್ಣನವರು ಆಗ ನಿರ್ಧರಿಸಿಬಿಟ್ಟರಂತೆ. ಕೆಲಸ ಸರಿ ಇರಬೇಕು ಅಂಬುವುದು ಆಗ ನೆನಪಿಗೆ ಬರಲಿಲ್ಲ ಅಂತ ತೋರುತ್ತೆ ಅದರಿಂದ ಆಗಾಗ ಶಿವಣ್ಣನವರು ಒಂದು ರೀತಿ ಲಾಫಿಂಗ್‌ಸ್ಟಾಕ್ ಆಗಿಬಿಡುತ್ತಿದ್ದರು.

ಒಂದು ಸಲ ಯಾವುದೋ ಅರ್ಜೆಂಟ್ ಕೆಲಸ ಆಗಲೇಬೇಕಿತ್ತು. ಕೆಳಗಿನವರಿಗೆ ಅವರ ತುರ್ತಿನ ಬಗೆಗೆ ಹೇಳಿ ರಾತ್ರಿ ಎಂಟಕ್ಕೆ ಮನೆಗೆ ಹೋದರು ಶಿವಣ್ಣ. ರಾತ್ರಿ ಇಡೀ ಕೆಲಸ ನಡೆದು ಬೆಳಿಗ್ಗೆ ಇರುವ ಬರುವ ವೇಳೆಗೆ ಕೆಲಸ ಮುಗಿದಿತ್ತು. ಕೆಲಸಕ್ಕೇ ಬಂದ ಕೂಡಲೇ ಕಿರಿ ಅಧಿಕಾರೀನ ಕರೆದರು.

''ಏನ್ರೀ ಆ ಪಿಸಿಬಿ ಕೆಲಸ ಆಯಿತೇನ್ರೀ?''

ಕಿರಿ ಅಧಿಕಾರಿ ತಲೆ ಕೆರೆಯುತ್ತಾ 'ಆಯಿತು ಸಾರ್' ಅಂದರು.

'ಗುಡ್' ಅಂದರು ಶಿವಣ್ಣ.

'ತ್ರೀ ಪಾಯಿಂಟ್ ಒನ್ ಡ್ರಿಲ್ ಹಾಕು ಅಂತ ಹೇಳಿದ್ದೆ ಸಾರ್ ಆಪರೇಟರ್‌ಗೆ...'

'ವೆರಿಗುಡ್'... ಅಂದರು.

'ಆದರೆ ಆಪರೇಟರು ರಾತ್ರಿ ಷಿಫ್ಟ್‌ನಲ್ಲಿದ್ದ ನಿದ್ದೆ ಕಣ್ಣಿನಲ್ಲಿ ತ್ರೀ ಪಾಯಿಂಟ್ ಒನ್‌ಗೆ ಬದಲು ಎಯ್ಟ್‌ಪಾಯಿಂಟ್ ಒನ್ ಹಾಕಿಬಿಟ್ಟಿದ್ದಾನೆ ಸಾರ್....'

'ಎಕ್ಸಲೆಂಟ್...' ಅಂದರು ಶಿವಣ್ಣ

'ಒನ್ ಹಂಡ್ರೆಡ್ ಸಿಕ್ಸ್ಟಿ ಪೀಸ್ ಪಿಸಿಬಿ ರಿಜೆಕ್ಟ್ ಆಗಿಬಿಟ್ಟಿದೆ ಸಾರ್...'

'ಹಾಗೇನ್ರೀ ವೆರಿಗುಡ್...' ಅಂದರು ಶಿವಣ್ಣ.

ಕ್ಯಾಕರಿಸಿ ಉಗಿಯುವಂತಹ ಕೆಲಸ ಆಗಿರೋದು ಇದಕ್ಕೆ ಇವರು 'ವೆರಿಗುಡ್' ಅಂತ ಹೇಳುತ್ತಿದ್ದಾರಲ್ಲಾ ಅಂತ ಕಿರಿ ಅಧಿಕಾರಿ ತಬ್ಬಿಬ್ಬಾದರು. ಅರ್ಧಘಂಟೆ ಶಿವಣ್ಣನವರೆದುರು ನಿಂತು ಆಗಿರುವ ಅನಾಹುತವನ್ನು ವಿವರಿಸಿ ವಿವರಿಸಿ ಹೇಳುವ ಹೊತ್ತಿಗೆ ಈತ ಸುಸ್ತು.

'ಹತ್ತು ಘಂಟೆಗೆ ಆಜಾಬ್ ಮೂವ್ ಆಗಬೇಕಿತ್ತಲ್ರೀ. 'ಬೇರೆ ಎಲ್ಲಾ ಕೆಲಸ ನಿಲ್ಲಿಸಿ ಇರೋ ಆಪರೇಟರುಗಳಿಗೆಲ್ಲಾ ಇದೇ ಕೆಲಸ ಅಂಟಿಸ್ರೀ. ಇನ್ನೂರು ಪಿಸಿಬಿ ಗಳನ್ನ ಸ್ಟೋರ್ಸ್ ನಿಂದ ಡ್ರಾಮಾಡ್ರೀ....' ಅಂತ ನಿರ್ದೇಶನ ನೀಡಿದರು. ಅದು ಹೇಗೋ ಪಿಸಿಬಿಗಳು ಸ್ಟೋರ್ಸ್‌ನಲ್ಲಿದ್ದವು - ಕೆಲಸ ಮುಗೀತು.

ಇದಕ್ಕಿಂತ ವಿಲಕ್ಷಣವಾದ ಒಂದು ಪ್ರಸಂಗ ನನ್ನೆದುರೇ ಒಂದು ಸಲ ನಡೀತು. ಪ್ರೆಸ್ ಶಾಪಿನಲ್ಲಿನ ಆಪರೇಟರು ಎರಡು ವಾರದಿಂದ ಕೆಲಸಕ್ಕೆ ಬಂದಿರಲಿಲ್ಲ. ಆ ಸಮಯದಲ್ಲೇ ಒಂದು ಅರ್ಜೆಂಟ್ ಕೆಲಸ ಬಂದಿತ್ತು. ಕೆಲಸ ಆಗಲೇಬೇಕು. ಬೇರೆ ಆಪರೇಟರುಗಳಿಗೆ ಅಲ್ಲಿ ಕೆಲಸ ಮಾಡಿ ತಿಳಿಯದು ಮತ್ತು ಬಲವಂತವಾಗಿ ಖಾಯಂ ಕೆಲಸಗಾರರನ್ನು ಇಂತಹ ಯಂತ್ರಗಳಲ್ಲಿ ಕೆಲಸ ಮಾಡಿಸಲು ಕಾರ್ಮಿಕ ಕಾಯಿದೆಗಳಲ್ಲಿ ಆಸ್ಪದವಿಲ್ಲ. ತರಬೇತಿ ನೀಡಿದ ನಂತರ ಬೇಕಿದ್ದರೆ ಕೆಲಸ ಮಾಡಿಸಬಹುದು. ಕಾರ್ಖಾನೆಗಳಲ್ಲಿ ಬಹುತೇಕ ನೂರಕ್ಕೆ ನೂರರಷ್ಟು ಕಾರ್ಮಿಕರಿಗೆ ಇಂತಹ ಅವರಿಗೆ ಅನುಕೂಲವೆನಿಸುವ ಕಾನೂನುಗಳು ಕರತಲಾಮಲಕ. ಆದರೂ ಇನ್ 'ಬೆಸ್ಟ್‌ಫೈತ್' ಯಂತ್ರಾಗಾರದ ಸೂಪರ್‌ವೈಸರು ಆರೇಳು ಕಾರ್ಮಿಕರನ್ನು ಬೇರೆ ಬೇರೆಯಾಗಿ ಸಂಪರ್ಕಿಸಿದ. 'ಇದು ತುಂಬಾ ಅರ್ಜೆಂಟು. ಆಪರೇಟರು ಖಾನು ಎರಡು ವಾರದಿಂದ ಬಂದಿಲ್ಲ. ಜಾಬ್ ಮಾಡ್ತೀರಾ?' ಅಂತ ಕೇಳಿದ.

'ಆದರ ಆಪರೇಷನ್ ನಮಗ್ಗೊತ್ತಿಲ್ದೇ ಕೈಕಾಲು ಕತ್ತರಿಸಿಕೊಂಡರೆ ನೀವು ನಮ್ಮ ಹೆಂಡತಿ ಮಕ್ಕಳನ್ನ ಸಾಕ್ತೀರಾ ಆಗಾಕಿಲ್ಲ....' ಎಂಬ ಒರಟು ಉತ್ತರಗಳು ಬಂತು. ಹಾಗೂ ಒಬ್ಬ ಆಪರೇಟರ್‌ಗೆ ಬಲವಂತ ಮಾಡಿ ಕೆಲಸ ಮಾಡಲು ಒಪ್ಪಿಸಿದರು. ಮಿಕ್ಕವರೆಲ್ಲಾ ಸೇರಿಕೊಂಡು 'ಅವರ ಕೈಲಿ ಹೇಗೆ ಮಾಡಿಸ್ತೀರ್‍ರೀ? ಟ್ರೇಡ್ ಯೂನಿಯನ್‌ತಾವ ಹೋಗ್ತೀವಿ...' ಅಂದರು. ಟ್ರೇಡ್ ಯೂನಿಯನ್ ಅಂದರೆ ಆ ಕಾಲದಲ್ಲೂ ಈ ಕಾಲದಲ್ಲೂ ಒಂದು ಈ.ಸಿ.ಪಿ. ECP ಈಸೀಪಿ ಅಂದರೆ ಗೊತ್ತಲ್ಲಾ? ಎಕ್ಸ್ಟ್ರಾ ಕಾನ್‌ಸ್ಟಿಟ್ಯೂಷನಲ್ ಪವರ್ ಹೊಂದಿರುವಂತಹದ್ದು.

ಟ್ರೇಡ್ ಯೂನಿಯನ್ ಹೆಸರು ಎತ್ತಿದರೆ ಸಾಕು ಅಧಿಕಾರಿಗಳು ನಡುಗಿ ಕೈ ಮುಗಿದು ದೂರ ಹೋಗುವಂತಹ ಸಂದರ್ಭಗಳು ಇವು. ಶಿವಣ್ಣನವರ ಹತ್ತಿರ ಕಿರಿ ಅಧಿಕಾರಿ ಈ ಸಮಸ್ಯೆ ವಿವರಿಸಿದ. ಶಿವಣ್ಣನವರು ಎರಡು ನಿಮಿಷ ಚಿಂತಿಸಿದರು.

'ರೀ ಟ್ರೈನಿಗಳದ್ದು ಯೂನಿಯನ್ ಇದೆಯೇನ್ರೀ?' ಅಂತ ಕೇಳಿದರು. 'ಇಲ್ಲ ಸಾರ್ ಟ್ರೈನಿಗಳನ್ನ ಇನ್ನೂ ಯೂನಿಯನ್ ಅವರು ಮೆಂಬರ್ರು ಮಾಡಿಸಿಲ್ಲ...' ಅಂತ ಉತ್ತರ ಬಂದಿತು.

'ಹಾಗಿದ್ರೆ ಯಾರಾದರೂ ಟ್ರೈನೀನ ಮೆಷೀನ್ ಮೇಲೆ ಬಿಡ್ರೀ...' ಅಂದರು. ಎತ್ತರಕ್ಕೆ ದಪ್ಪಗಿದ್ದ ಒಬ್ಬ ಟ್ರೈನೀನ ಹೆದರಿಸಿ ಬೆದರಿಸಿ ಬೆಣ್ಣೆ ಹಚ್ಚಿ ಆ ಮೆಷೀನ್‌ನ ಆಪರೇಟ್ ಮಾಡಲು ಒಪ್ಪಿಸಿದರು. ಅಲ್ಲೇ ಕಿರಿ ಅಧಿಕಾರಿಯೂ ನಿಂತು ಸೂಕ್ತ ನಿರ್ದೇಶನ ನೀಡುತ್ತಾ ಕೆಲಸ ಮಾಡಿಸುತ್ತಿದ್ದರು. ಕೊಂಚ ಅಜಾಗರೂಕತೆ ಆಯಿತು ಅಂತ ತೋರುತ್ತೆ. ಟ್ರೈನಿಯ ಕೈ ಬೆರಳು ಮೆಷೀನ್ ಸಂದೀಲಿ ಸಿಕ್ಕಿಕೊಂಡು ತುಂಡಾಗಿಬಿಟ್ಟಿತು. ಆತನನ್ನು ತುರ್ತಾಗಿ ಕಾರ್ಖಾನೆ ಆಸ್ಪತ್ರೆಗೆ ಸಾಗಿಸಿದರು. ಮಾರನೇ ದಿವಸ ಶಿವಣ್ಣನವರು ಬಂದ ಕೂಡಲೇ ಈ ಪ್ರಸಂಗ ವರದಿ ಆಯಿತು. ಆಗ ನಾನು ಅಲ್ಲೇ ಇದ್ದೆ. ವರದಿ ಹೀಗೆ ಆಯಿತು.

'ನಿನ್ನೆ ಪ್ರೆಸ್ ಮೆಷೀನ್‌ಗೆ ಟ್ರೈನೀನ ಹಾಕಿದ್ದೆ ಸಾರ್...'

'ಗುಡ್...' ಅಂದರು

'ಟೆನ್ ಪರ್ಸೆಂಟ್ ಜಾಬ್ ಆಗಿತ್ತು ಸಾರ್...'

'ವೆರಿಗುಡ್...'

'ಅಷ್ಟರಲ್ಲಿ ಟ್ರೈನೀ ಬೆರಳು ಮೆಷೀನಿಗೆ ಸಿಕ್ಕಿ ಬೆರಳು ಇಷ್ಟುದ್ದ (ಅಂಥ ಕೈನಲ್ಲಿ ಒಂದಿಂಚಿನಷ್ಟು ತೋರಿಸಿ) ಕಟ್ ಆಗಿ ಬಿಟ್ಟಿತು ಸಾರ್...'

'ಎಕ್ಸಲೆಂಟ್...'

ಕಿರಿ ಅಧಿಕಾರಿ ತಲೆಚಚ್ಚಿಕೊಂಡು ಆಗಿದ್ದ ಅನಾಹುತವನ್ನು ವಿವರಿಸುವ ವೇಳೆಗೆ ಸುಸ್ತು ಹೊಡೆದು ಹೋಗಿದ್ದ.

ಕಾರ್ಖಾನೇಲಿ ಇದು ದೊಡ್ಡ ಹಗರಣ ಆಗುವ ಮೊದಲೇ ಟ್ರೈನಿಗೆ ಇಲ್ಲೇ ಖಾಯಂ ಕೆಲಸ ನೀಡಿ ಆತನ ಸಾಮಾಜಿಕ ಜವಾಬ್ದಾರಿಯನ್ನ ಹೊತ್ತಿಕೊಂಡಿದ್ದರಿಂದ ವಿಷಯ ರಾದ್ಧಾಂತದ ಹಂತ ಏರಲಿಲ್ಲ. ಈ ಜನ ಮೆಚ್ಚಿಗೆಯ ಮಾತುಗಾರಿಕೆಯಿಂದ ಶಿವಣ್ಣ ಅಂದರೆ ಈಗಲೂ ನಮ್ಮ ಹುಡುಗರು ಕಣ್ಣು ಮೂಗು ಅರಳಿಸಿ ನೆನಪಿನ ದೋಣಿ ಏರುತ್ತಾರೆ! ಒಂದು ರೀತಿಯ ಶಿವಾನುಭವ ಪಡೀತಾರೆ.

ಮಳೆರಾಯನಿಗೆ ನಮಸ್ಕಾರ!

– ಶೋಭಾ ಪ್ರಮೋದ್

''ಚಳಿಗಾಲ ಬಂದಾಗ ಎಂತಹ ಚಳಿಯೆನ್ನುವರು
ಬಂತಲ್ಲ ಬೇಸಿಗೆ ಕೆಟ್ಟ ಬಿಸಿಲೆನ್ನುವರು!
ಮಳೆ ಬಂತೂ ''ಬಿಡದಲ್ಲ ಶನಿ'' ಎಂಬುವರ ಟೀಕೆ!
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ''!!

ಹೈಸ್ಕೂಲಿನಲ್ಲಿ ಕಂಠಪಾಠ ಮಾಡಿದ ಈ ಕವಿತೆ ಮೊನ್ನೆ ಥಕ್ಕನೆ ನೆನಪಾದದ್ದು, ನನ್ನ ಪತಿರಾಯರು ಈ ವರ್ಷ ಧಾರಾಕಾರ ಸುರಿದ ಮಳೆಯನ್ನು ಶಪಿಸಿದಾಗಲೇ! ಬಾನಿನ ತುಂಬ ಕಪ್ಪು ಚಾದರವನ್ನು ಬೀಸಿ, ಗುಡ್ಡ-ಬೆಟ್ಟಗಳ ಮೇಲೆ ಕುಣಿಯುತ್ತ ಸಾಗುವ, ಘನ ನೀಳ ಮೇಘಗಳು, ಧೋ-ಧೋ ಎಂದು ಸುರಿದು, ಎಲೆಗಳ ಮಣ್ಣನ್ನೆಲ್ಲ ಸ್ವಚ್ಛಗೊಳಿಸಿ, ಇಡೀ ಪ್ರಕೃತಿಯನ್ನೇ ನಿತ್ಯ ಹಸಿರನ್ನಾಗಿ ಕಂಗೊಳಿಸುವ ಮಳೆರಾಯನಿಗೆ ಹಾಗೂ ನನಗೆ ಮಾತ್ರ ಬಾಲ್ಯದ ಚಡ್ಡಿದೋಸ್ತಿಯಿದೆ ಮಾರಾಯ್ರೇ!

''ಬಾಲವಾಡಿಗೆ ಹೋಗಲಾರೆ'' - ಎಂದು ಚಂಡಿ ಚಾಮುಂಡಿಯಾಗಿ ಅಳುವ ನಾನು, ಮಳೆಗಾಲದಿಂದ ಪುಳಕಿತಳಾಗಿ ನಗುತ್ತ ಬಾಲವಾಡಿಗೆ ಹೋಗಿದ್ದುಂಟು. ರಸ್ತೆಯ ಹೊಂಡದಲ್ಲಿರುವ ನೀರನ್ನು, ಪಚ-ಪಚ ಎಂದು ಹಾರಾಡಿಸಿ, ಮಳೆಯಿಂದ, ಶಾಲಾ ಸಮವಸ್ತ್ರವೆಲ್ಲ ಒದ್ದೆಯಾದರೂ, ಖುಶಿಯಾಗಿ, ಶಾಲೆಗೆ ಹೋಗಿ, ಒದ್ದೆಯಿಂದ ಅಭಿಷೇಕಳಾಗಿರುವವಳನ್ನು ಕಂಡು ಮಾಸ್ತರರು ಬರ್ಲೆಏಟು ಕೊಟ್ಟಿದ್ದು ಇಂದಿಗೂ ನೆನಪಿದೆ!

ಇನ್ನು ಹೈಸ್ಕೂಲ್, ಗುಡ್ಡದ ಮೇಲೆಯೇ ಇತ್ತು! 'ಗಿಬ್' ಎಂಬ ಹೆಸರಿನ ಆಂಗ್ಲ ಅಧಿಕಾರಿಯ ಸಹಾಯದ ಸ್ಮರಣಾರ್ಥ ಗಿಬ್ ಗರ್ಲ್ಸ್ ಹೈಸ್ಕೂಲ್ ಅದಾಗಿತ್ತು! ಎವರೆಸ್ಟ್ ಏರಿದಂತೆ, ಹೈಸ್ಕೂಲಿನ ಗುಡ್ಡವನ್ನೇರುವದು, ಸಮೀಪದ ಗುಡ್ಡ - ಬೆಟ್ಟಗಳ ಸೌಂದರ್ಯ, ಮೇಘಗಳ ಲಯಬದ್ಧವಾದ ನಡೆ, ಗುಡುಗು - ಮಿಂಚುಗಳ ಅವರ್ಣನೀಯ ಸೊಬಗನ್ನು ಹೀರುತ್ತ, ಮಳೆರಾಯನ ಕೃಪಾಕಟಾಕ್ಷದಿಂದ ಸಂಪೂರ್ಣ ಒದ್ದೆಮಯಳಾಗಿ ಲಕ-ಲಕಿಸುತ್ತ ಹೈಸ್ಕೂಲ್ ಶಿಕ್ಷಣ ಮುಗಿಸಿದ್ದೆ.

ಕಾಲೇಜು ಮುಗಿಸಿ, ಬಿ.ಎಡ್. ಮಾಡ್ತಿರುವಾಗ, ಸಂಪೂರ್ಣ ತೊಯ್ದ ನಮ್ಮನ್ನೇ, ಹೈಸ್ಕೂಲ್ ವಿದ್ಯಾರ್ಥಿಗಳು ಕಣ್‌ಕಣ್ ಬಿಟ್ಟು ನೋಡುತ್ತಿದ್ದರಿಂದ ಆ ಕ್ಲಾಸಿನಲ್ಲಿ ಶಾಂತತೆ ಪ್ರಾಪ್ತಿಯಾಗಿ, Best Teacher award of the year ಎಂಬ ವಾರ್ಷಿಕ ಪ್ರಶಸ್ತಿಯೂ ನನಗೆ ದೊರಕುವಂತಾಗಲು, ಮಳೆರಾಯನೇ ಕಾರಣ! ಹಾಗಾಗಿ ನಿಜಕ್ಕೂ, ನನ್ನ ಪಾಲಿಗಾತ Best Friend!

ಅವಿವಾಹಿತೆಯಾಗಿದ್ದಾಗ ಮಳೆಗಾಲದಲ್ಲಿ ಗುಡ್ಡದಲ್ಲಿ ನಿಂತು ಸೌಂದರ್ಯ ಸವಿಯುತ್ತ, ಜಲಪಾತಗಳನ್ನು ಕಂಡು ಹಿಗ್ಗುತ್ತ, ದಿನ ಕಳೆಯುವಂತೆ ವಿವಾಹವಾದ ಬಳಿಕ ''ತಾಳಿ'' ಎಂಬ 'ಲೈಸನ್ಸ್' ಕೊರಳಿಗೆ ಜೋತುಬಿದ್ದಾಗ ಹುಚ್ಚಾಟದ ಹವ್ಯಾಸಗಳೆಲ್ಲ ಸಾಧ್ಯವೇ ಸ್ವಾಮೀ!? ಆದರೂ ನಾನು ಮಳೆಗಾಲದಲ್ಲಿ ''ಕೊಡೆ'' ಸಂಗಾತಿಯಾಗಿ ತೆಗೆದುಕೊಂಡು ಹೋಗುವುದು ಬಲು ಅಪರೂಪ. (ಮಳೆಯಿಂದ ಸಾಕಷ್ಟು ಒದ್ದೆಯಾಗಿ, ಬಾಲ್ಯದ ಸುಖವನ್ನು ಸವಿಯುವ ಕೆಟ್ಟ ಆಸೆ ಅಷ್ಟೇ!)

ಪೇಟೆಗೆ ಹೋಗುವಾಗ, ಮುಗಿಲನ್ನು ದಿಟ್ಟಿಸಿ, ''ಮಳೆ ಮಾರಾಯಾ, ನಾನು ಪೇಟೆಯಿಂದ ಬರೋ ತನಕ ಬಹಳ ದೊಡ್ಡ ಮಳೆ ಸುರಿಸಬೇಡ. ತುಂತುರು ಹನಿ-ಕಾರಂಜಿಯಂತೆ ಮಳೆಯನ್ನು ಸುರಿಸು'' ಎಂದು ಬೇಡಿಕೊಳ್ಳುತ್ತೇನೆ. ಪ್ರತೀ ಸಲವೂ ಹಾಗೆಯೇ ಆಗಿದೆ. ಎಂದರೆ ಮಳೆರಾಯ ನನ್ನ ಪ್ರಾರ್ಥನೆಯನ್ನು ಆಲಿಸಿ, ಈಡೇರಿಸಿದ್ದಾನೆ. ಗೇಣಗಲದ ನೈಲಾನ್ ಕೊಡೆಗೆ ಮಜಾ ಇದೆಯಾ? ಸೀರೆಯೂ ಒದ್ದೆ, ಎರಡೂ ತೋಳುಗಳೂ ಒದ್ದೆ, ತಲೆಯೂ ಒದ್ದೆ. ಸ್ವಲ್ಪ ಬೆಚ್ಚಗಿರುವದೆಂದರೆ ನಮ್ಮ ಉದರ ಮಾತ್ರ! ಹಾಗಾಗಿ ಸುಳ್ಳು ಸಾಂತ್ವನ ಕೊಡುವ ಫ್ಯಾಶನ್ ಕೊಡೆಗಳ ಕಡು ವಿರೋಧಿ ನಾನು!

ಮೊನ್ನೆ ಅದೇ ಕೆಟ್ಟ ಧೈರ್ಯದಿಂದ, ಕೊಡೆ ಒಯ್ಯದೆ, ಬ್ಯಾಂಕಿಗೆ ಹೋಗಿದ್ದೆ. ಬರುವಾಗ, ಮಳೆರಾಯ ನನ್ನ ಬೇಡಿಕೆಯನ್ನು ಕೇಳದೆ, ಧಾರಾಕಾರವಾಗಿ ಮಳೆ ಸುರಿಸಿಯೇ ಬಿಡಬೇಕೇ?!

''ಎಲೈ ಹುಲುದೇಹವೇ! ಮಳೆಗೆ ಅಂಜಬೇಡ. ಬಾಲ್ಯದಲ್ಲಿ ಕುಣಿದ 'ಆಟ'ವನ್ನು ಮತ್ತೊಮ್ಮೆ ಗೈಯುವಂತಳಾಗು'' ಎಂದು ನನ್ನ ಮರ್ಕಟ ಮನಸ್ಸು, ಆದೇಶವನ್ನೇ ನೀಡಿತು! ರಪ-ರಪ ಎಂದು ರಾಚುವ ಭಾರೀ ಬಿರುಮಳೆಯನ್ನೊಮ್ಮೆ ಕಂಡು ವ್ಯಂಗ್ಯದಿಂದ ನಕ್ಕು, ಹಾಗೆಯೇ ಮನೆಯ ಕಡೆಗೆ ಹೆಜ್ಜೆ ಹಾಕಲಾರಂಭಿಸಿದೆ.


''ಎಲ್ಲಿ ಆ ಬಾಲ್ಯಕೆ ಸಾಕ್ಷಿ? ಗತಕಾಲಕ್ಕಿದ್ದ ಗವಾಕ್ಷಿ'' ಎಂಬಂತೆ ಕುವೆಂಪುರವರ ನುಡಿಗಳು ನೆನಪಾಗಿ, ನನ್ನ ಬಾಲ್ಯ ಮತ್ತೊಮ್ಮೆ ಮರುಕಳಿಸಿದೆ ಎಂಬ ಭ್ರಮೆಯಲ್ಲಿಯೇ, ಮಳೆ ನೀರನ್ನು ರಾಚುತ್ತ . ಬರುತ್ತಿದ್ದೆ! ಪರಿಚಯದವರೆಲ್ಲರೂ ನನ್ನ ವಿಚಿತ್ರ ವೇಷ ಕಂಡು ತಲೆ ನೆಟ್ಟಗಿಲ್ಲದ ಬಿರುದನ್ನು ದಯಪಾಲಿಸಿರಬೇಕು!

ರಾತ್ರಿ ಪತಿರಾಯರು ನರಸಿಂಹಾವತಾರ ತಾಳಿ ಮನೆಗೆ ಬಂದರು!

''ಬೆಳಿಗ್ಗೆ, ಧಾರಾಕಾರ ಮಳೆಯಲ್ಲಿ ಎಲ್ಲಿಗೆ ಹೋಗಿದ್ದೆ? ಪರಿಚಿತರೆಲ್ಲರೂ ಹೆಂಡ್ತಿಗೆ ಕೊಡೆ ತರಿಸಿಕೊಡದ ಪಿಟ್ಟಾಸಿ'' ಎಂದು ಗೇಲಿ ಮಾಡ್ತಿದ್ದಾರೆ! ನಾಳೆಯಿಂದ ಹೀಗೆಲ್ಲ ಹುಚ್ಚಾಟವನ್ನು ಆಡಿದ್ರೆ ಸೀದಾ ತವರಿಗೇ ಅಟ್ಟಿಸ್ತೇನೆ ಗೊತ್ತಾ?! ನನ್ನವರ ಆರ್ಭಟ, ಮುಂಗಾರು ಮಳೆ, ಗುಡುಗು, ಮಿಂಚುಗಳಿಗೇನೂ ಕಮ್ಮಿಯಾಗಿರಲಿಲ್ಲ!

ಧಾರಾಕಾರ ಮಳೆಯಿಂದ ತೊಯ್ದು, ಮನೆಗೆ ಬಂದು ಬಟ್ಟೆ ಬದಲಿಸಿ, ಒಣಗಿದ ಅರಿವೆಗಳನ್ನು ಧರಿಸಿ ''ಗರಂ'' ಕಾಫಿ ಕುಡಿದು, ಸುಖದ ಮತ್ತಿನಲ್ಲಿದ್ದ ನಾನು, ಪತಿರಾಯರ ಆರ್ಭಟ ಕಂಡು, ಮಳೆಯಿಂದ ತೊಯ್ದು ''ಚಳಿಜ್ವರ'' ಬಂದವಳಂತೆ ಗಡ-ಗಡ ನಡುಗಿದ್ದು ಮಾತ್ರ ಸುಳ್ಳಲ್ಲ ಮಾರಾಯ್ರೇ!

ಪಂಚ್ ಕೃಪೆ



ಸ್ಟೈಲ್ ಏನು ಬಂತು ಡಾಕ್ಟರ್, A ಯಿಂದ B ಗೆ
ಹೋಗೋದಕ್ಕೆ ಯಾವ್ದಾದ್ರೂ ಕನ್ನಡಕ ಕೊಟ್ರೆ ಮುಗೀತು

ಅಂಜಿಕಿನ್ಯಾತಕಯ್ಯಾ.....?

- ಅರುಣಾ ಆರ್. ಕಾರಂತ

ಹೇಳಿ ಕೇಳಿ ನಾವು ಬ್ಯಾಂಕಿನವರು, ಯಾವಾಗಲೂ ಲಕ್ಷ್ಮೀಜತೆಯಲ್ಲಿಯೇ ಇರುವವರು. ಎಲ್ಲಾ ಬ್ಯಾಂಕುಗಳಲ್ಲಿರುವಂತೆಯೇ ನಮ್ಮ ಬ್ಯಾಂಕಿನಲ್ಲಿಯೂ ಉಳಿತಾಯ ಖಾತೆ, ನಿಖರ ಠೇವಣಿ ಖಾತೆ, ಎಂದೆಲ್ಲಾ ಬರಹಗಳಿರುವಂತೆ ''ಸಾಲದ ಖಾತೆ'' ಎಂಬ ಒಂದು ನಾಮ ಫಲಕವೂ ಇದೆ, ಈ ಖಾತೆಯೆಂದರೆ ನನಗೆ ಬಹಳ ಇಷ್ಟ. ಏಕೆಂದರೆ ಹೇಳಿ ಕೇಳಿ ಇದು ಸಾಲದ ಖಾತೆ. ಸಾಕು ಎನ್ನುವ ಮಾತೇ ಇಲ್ಲಿಲ್ಲ. ಇಲ್ಲಿಗೆ ಒಮ್ಮೆ ಬಂದವರು ಮತ್ತೆ ಮತ್ತೆ ಬರುತ್ತಲೇ ಇರುತ್ತಾರೆ, ಇಲ್ಲಿಗೆ ಬರುವವರ್‍ಯಾರಿಗೂ ತೃಪ್ತಿಯೆಂಬುದೇ ಇಲ್ಲ. ತಾಪತ್ರಯಗಳಿಂದ ಸುಸ್ತಾಗಿ ತಲೆ ಕೆಟ್ಟು ಎಲ್ಲೂ ಸವಕಳಿ - ಕಾಸೂ ಹುಟ್ಟದೇ ಬರುವವರೇ ಜಾಸ್ತಿ. ಇಲ್ಲಿಗೆ ಬರುವವರಿಗೆ ದಾಸರು ಹೇಳಿದಂತೆ ''ಇಷ್ಟು ದೊರೆತರೆ ಮತ್ತಷ್ಟು ಆಸೆ, ಅಷ್ಟು ದೊರೆತರೆ ಇನ್ನಷ್ಟು ಆಸೆ, ಕಷ್ಟ ಬೇಡೆಂಬಾಸೆ ಸುಖವ ಪಡುವಾಸೆ'' ಹೀಗೆ ನೀವು ನೀಡುವೆವೆಂದರೆ ಅವರು ಎಷ್ಟು ಕೊಟ್ಟರೂ ಒಯ್ಯಲು ತಯಾರಿ. ಇವರನ್ನು ತೃಪ್ತಿ ಪಡಿಸಲು ವಿಶ್ವಬ್ಯಾಂಕಿನ ಖಜಾನೆಯೂ ಸಾಲದೇನೋ....!?

ಇವರೆಲ್ಲರಿಗೂ ಚಾರ್ವಾಕ ಸಿದ್ಧಾಂತವೆಂದರೆ ಬಹಳ ಪ್ರೀತಿ. ಆತನ ''ಋಣಂ ಕೃತ್ವಾ ಘೃತಂ ಪಿಬೇತ್'' ಎಂಬ ಮಾತು ಚಾರು ವಾಕ್ ಹಿತವಾದ ಮಧುರವಾದಂತಹ ಮಾತು. ಕಿವಿಗೆ, ಹೃದಯಕ್ಕೆ, ಮನಸ್ಸಿಗೆ ಆಪ್ಯಾಯಮಾನ. ಇವರಿಗೆ ''ಕಡ ಹುಟ್ಟಿ ಬಡವ ಕೆಟ್ಟ'' ಎಂಬ ಹಿತ ನುಡಿ ಕರ್ಣ ಕಠೋರ. ಏಕೆಂದರೆ ಇವರೆಲ್ಲರೂ ಆ ಚಾರ್ವಾಕ ಜನಿಸಿದ ಪುಣ್ಯ (ಪಣ್ಯ) ಭೂಮಿಯಾದ ಇದೇ ಭಾರತದಲ್ಲಿ ಹುಟ್ಟಿದವರಲ್ಲವೇ? ಆತನ ಪ್ರಭಾವ ಈ ನೆಲದ ಮೇಲೆ ಎಷ್ಟಾಗಿದೆಯೆಂದರೆ ಈ ದೇಶಕ್ಕೂ ಸಾಲ ಮಾಡುವುದೆಂದ್ರೆ ಅದಮ್ಯ ಪ್ರೀತಿ. ನಮ್ಮ ಬಡ ಜನರ ಉದ್ಧಾರಕ್ಕಾಗಿ ನೂರೆಂಟು ಯೋಜನೆಗಳನ್ನು ಸೃಷ್ಟಿಸಿ ಸಾಲ ಕೊಡಬಲ್ಲ ಪರದೇಶಿ ರಾಷ್ಟ್ರಗಳಿಗೆ ರತ್ನಗಂಬಳಿ ಹಾಸುವವರು ನಾವು. ನಂತರ ಬಡ್ಡಿ ಕೊಡಲಾಗದಿದ್ದರೆ ಅದಕ್ಕೂ ಸಾಲ ಮಾಡುವುದಕ್ಕೆ ನಮಗೇನೂ ಬಿಡೆಯಿಲ್ಲ. ಹುಟ್ಟುವ ಮಕ್ಕಳ ತಲೆಯ ಮೇಲೆಯೂ ಹತ್ತು-ಹನ್ನೆರಡು ಸಾವಿರ ಸಾಲ ಇದೆ ಅಂತ ಅರ್ಥಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ಈ ಮಣ್ಣಿನ ಮಕ್ಕಳಿಗೆ ಈ ಜಾಡ್ಯ ಅಂಟಿದರೆ ವಿಶೇಷವೇನಿದೆ ಹೇಳಿ?

ಇಲ್ಲಿ ಸಾಲಕ್ಕಾಗಿ ಬರುವವರು ಸಾಲಕ್ಕೆ ಆಧಾರವಾಗಿ ಏನು ಕೇಳಿದರೂ ಕೊಡಲು ತಯಾರು, ನಿಮ್ಮ ಎಷ್ಟು ಕಾಗದ - ಪತ್ರಗಳಿಗೂ ಹೆಬ್ಬೆಟ್ಟೊತ್ತಲು ರೆಡಿ. ನಿಮ್ಮೆಲ್ಲಾ ಕಂಡೀಷನ್‌ಗಳಿಗೂ ಅನ್‌ಕಂಡೀಷನಲ್ ಒಪ್ಪಿಗೆ ನೀಡುತ್ತಾರೆ. ಇದಕ್ಕಾಗಿ ಎಷ್ಟು ಬಾರಿ ಬ್ಯಾಂಕಿಗೆ ಎಡತಾಕಲೂ ಸರಿ, ಹಾಗಿದ್ದರೂ ನಗುಮೊಗದಿಂದಲೇ ನಿಮ್ಮನ್ನು ''ಸಾರೂ'' ''ಸಾರೂ'' ಎಂದು ಸಂಬೋಧಿಸುತ್ತಾರೆ, ನೀವು ಕಾಲಲ್ಲಿ ತೋರಿಸಿದ್ದನ್ನು ತಲೆಯ ಮೇಲೆ ಹೊತ್ತು ಮಾಡುತ್ತಾರೆ.

ಸಾಲ ಕೈಗೆ ಸಿಕ್ಕಾಗ ಅವರಿಗುಂಟಾಗುವ ಪರಮಾನಂದವನ್ನು, ಪ್ರಸನ್ನತೆಯನ್ನು ಅವರಲ್ಲುಂಟಾಗುವ ಧನ್ಯತಾಭಾವವನ್ನು ಎಷ್ಟು ರೀತಿಯಿಂದ ವರ್ಣಿಸಿದರೂ ಸಮಾಧಾನವಾಗದು. ಬೇಡ ಬೇಡವೆಂದರೂ ಟಾ ಪಾರ್ಟಿ ಕೊಡಲು ಮುಂದಾಗುತ್ತಾರೆ. ಸ್ವಲ್ಪ ಹಣಕ್ಕೆ ಕೈಚಾಚುವವರೆಂದು ಕಂಡರೆ ಅದಕ್ಕೂ ಸರಿಯೇ, ಎಲ್ಲಿಡೆ ಗಂಡು ಮಗು ಜನಿಸಿದರೆ, ಮಗನ ಮದುವೆಯಾದರೆ, ಉದ್ಯೋಗದಲ್ಲಿ ಭಡ್ತಿ ಹೊಂದಿದರೆ ಪಾರ್ಟಿ ಕೊಟ್ಟರೆ ಈ ಜನ ಸಾಲ ಸಿಕ್ಕಿದಾಗ ಪಾರ್ಟಿ ಕೊಡುತ್ತಾರೆ. ಇಷ್ಟಕ್ಕೆ ಮುಗಿಯಲಿಲ್ಲ, ಈ ಸಾಲಕೊಂಬರಿಗೆ ಸಾಲವೆಂದಿಗೂ ಸಾಲುವುದೇ ಇಲ್ಲ ಅದಕ್ಕೆ ಹೇಳುವುದು ಇದು ಸಾಲದ ಖಾತೆಯೆಂದು! ಯಾವಾಗಲೂ ಮತ್ತೆಲ್ಲಿ ಸಾಲ ಸಿಗುತ್ತದೋ, ಇನ್ಯಾವ ರೀತಿಯ ಸಾಲ ಸಿಗುತ್ತದೋ ಎಂದು ಲೆಖ್ಖ ಹಾಕುತ್ತಿರುತ್ತಾರೆ. ಆಗೆಲ್ಲ ತಮ್ಮ ವಿನಯ, ಮುಗ್ಧತೆ, ಅಮಾಯಕತನದ ಮುಖವಾಡ ಧರಿಸಿ ಕಲ್ಲು ಕರಗುವಂತೆ ಕಣ್ಣೀರಿಳಿಸಿ ಸಾಲ ಪಡೆಯುತ್ತಾರೆ ಇವರಿಗೆ ಸರ್ವಜ್ಞನ ''ಸಾಲವನು ಕೊಂಬಾಗ ಹಾಲೋಗರ ಉಂಡಂತೆ...'' ಎಂಬ ತ್ರಿಪದಿಯ ಮೊದಲ ನುಡಿ ಮಾತ್ರ ಜ್ಞಾಪಕದಲ್ಲಿರುವುದು. ಇನ್ನೊಂದು ಗಾದೆಯ ಮಾತಿದೆ, ಸಾವಿರ ಕೊಳ್ಳುವತನಕ ಪಡೆಯುವವನಿಗಂಜಿಕೆ, ಸಾವಿರದ ಮೇಲೆ ಪಡೆದಾಗ ಕೊಟ್ಟವನಿಗಂಜಿಕೆ ಎಂದು. ಇದರ ಸತ್ಯತೆಯ ನಿಚ್ಚಳ ಅರಿವು ಇವರಿಗೆ ಇದೆ.

ಈ ಬಗೆಯ ವ್ಯಾಪಕ ಬೆಳವಣಿಗೆ ಇತ್ತೀಚಿನದು ಎಂದೆನಿಸುತ್ತದೆ. ಬ್ಯಾಂಕುಗಳಿಗೆ ಸಾಮಾಜಿಕ ಅಸಮಾನತೆ ನೀಗಿಸಲು ತೊಡಗಿಸಬೇಕಾದ ಜವಾಬ್ದಾರಿ ಉಂಟಾದಾಗ, ಅದಕ್ಕಾಗಿ ನಿಗದಿತ ಟಾರ್ಗೆಟ್ಟು, ಗೋಲುಗಳನ್ನು ಸೂಚಿಸಿದಾಗ, ಹಿಂದೆ ಪೂಜಾರಪ್ಪನ ಸಾಲ ಮೇಳ ಹುಟ್ಟಿಕೊಂಡಾಗ, ಮೊದ ಮೊದಲು ಬ್ಯಾಂಕುಗಳ ಅನಿವಾರ್ಯವಾಗಿ ಅಂದಿನ ಸಾಲ ಹಂಚುವ ಜಾಡ್ಯ, ಸಾಲಗಾರರೆಲ್ಲ ಋಣಾನುಭವಿಗಳಾಗುವುದಕ್ಕೆ ಬದಲು ಫಲಾನುಭವಿಗಳಾದರು. ಸರಕಾರಿ ಯೋಜನೆಯ ಫಲಾನುಭವಿ, ಸಾಲಿಗನಾದ ಮೇಲೆ ಬ್ಯಾಂಕುಗಳ ಸಾಲ

ನೀಡುವಿಕೆಯ ನಿಯಮಾವಳಿಯ ಪರದೆ ತಿಳಿಯಾಯಿತು, ಈ ಸಾಲದ ಅರ್ಜಿಗಳು ರಾಜಕೀಯದ ದುರ್ಗಂಧವನ್ನು ಹೀರಿಕೊಂಡು ಸರಕಾರದ ಕೆಂಪು ಪಟ್ಟಿಯನ್ನು ದಾಟಿ ಬ್ಯಾಂಕುಗಳಿಗೆ ಬರುವಾಗ ಅಲ್ಲಲ್ಲಿ ಕೆಲವರು ತಾವು ತಿಂದೂ ಅರಗಿಸಿಯೂಕೊಂಡರು ಜೇನು ತುಪ್ಪ ಹಿಂಡುವವ ಕೈ ನೆಕ್ಕದಿರುತ್ತಾನೆಯೇ?!

ಹೀಗಿರುವಾಗ ಸಾಲ ಕೊಟ್ಟ ನಂತರ ನಮ್ಮ ಸೋಲರಿಯದ ಸಾಲಗಾರನ ಚರ್ಯೆಯೂ ಬದಲಾದರೆ ತಪ್ಪೇನು ಇಲ್ಲ ಅಲ್ಲವೆ?! ದೀನನಾಗಿ ಹಣಕಾಸಿನ ಸಂಸ್ಥೆಯ ಬಾಗಿಲಿಗೆ ಬಂದ ಬಡ ಬೋರೆಗೌಡ ಒಮ್ಮೆಲೆ ತಿಳಿ ರೇಷ್ಮೆಯ ಪಂಚೆಯುಟ್ಟು ಬಿಳಿಯ ಜುಬ್ಬಾ ಹಾಕಿ ಜರಿಕಿ ಜೋಡು ಮೆಟ್ಟಿ ತಿರುಗುವಂಥವನಾದ, ಬ್ಯಾಂಕಿನವರ ಸಾಸಿರ ನೋಟೀಸು ಆತನಿಗೆ ಚಿಂದಿ ಕಾಗದಕ್ಕಿಂತ ಕಡೆಯಾಯಿತು. ಅಕಸ್ಮಾತ್ ನಾಲ್ಕು ಜನರ ನಡುವೆ ಅಂಚೆ ಜವಾನ ನೋಟೀಸು ತಂದು ಕೊಟ್ಟರೆ ಅದನ್ನು ನಿರ್ಲಕ್ಷ್ಯದಿಂದ ಅಲ್ಲಿಯೇ ಹರಿದು ಎಸೆಯತೊಡಗಿದ. ಬ್ಯಾಂಕಿನ ಎದುರಿನಲ್ಲಿ ಹೋಗುವ ಸಾಲಗಾರನಿಗೆ ಬ್ಯಾಂಕ್ ಮ್ಯಾನೇಜರ್ ಹೇಳಿಕಳಿಸಿದರೆ 'ಈಗ ಬರಾಕಾಗಲ್ಲ' ಬಿಸಿ ಇದ್ದೇನೆ 'ಎಲೆಕ್ಷನ್ ಬಂದೈತಿ' ನಿಮ್ ಸಾಹೇಬನ್ನ ಆಮೇಲೆ ಕಾಣ್ತೀನಂತ ಹೇಳು ಎಂದು ಉಡಾಫೆ ಮಾಡತೊಡಗಿದ. ಹಾಗೊಮ್ಮೆ ಸ್ವತಃ ಮ್ಯಾನೇಜರ ಕಂಡು ಕೇಳಿದರೆ, ಏನ್ರಿ ನೀವ್ ಹೇಳೋದು? ನಮ್ಗೂ ಪ್ರಿಸ್ಟೀಜ್ ಇಲ್ವೆ, ಏನ್ ಕಂಡಕಂಡಲ್ಲೆಲ್ಲಾ ಕೇಳ್ತೀಯಾ. ನೀನೇನ್ ನಿನ್ ಕೈಯಿಂದ ಕೊಟ್ಟಿದ್ಯಾ? ಕೊಡ್ತೀನಂತೆ, ಸ್ವಲ್ಪ ತಡ್ಕೊ. ಈ ಇಲೆಕ್ಷನ್ ಗಲಾಟೆಯಲ್ಲಾ ಮುಗೀಲಿ ಎಂದಾಗ ಮ್ಯಾನೇಜರ್ ತೆಪ್ಪಗಿದ್ರೆ ಅವ್ನ ಮರ್ಯಾದೆ ಉಳಿಯುತ್ತದೆ ಇಲ್ಲಾ ಅಂದ್ರೆ, ''ನಿಮ್ ಅಪ್ಪನ್ ಮನೆಯಿಂದ ಕೊಟ್ಟಿದ್ಯಾ? ಸರ್ಕಾರದ್ ದುಡ್ಡು, ನಮ್ಮಂತೋರಿಗೆ ಕೊಡ್ಬೇಕಂತ ಆದೇಶ ಬಂದೈತಿ ಕೊಟ್ಟಿದ್ದಿ, ಇಲ್ಲಾಂದ್ರೆ ಈ ಬ್ಯಾಂಕ್‌ನೋರು ಎಲ್ಲಿ ಕೊಡ್ತಿದ್ರು. ಬಡವರ್ನ ಕಂಡ್ರೆ ಹುಚ್ ನಾಯಿನ್ನ ಓಡಿಸ್ದಾಂಗ ಓಡಿಸೋರು. ನೀಯೇನ್ ಮಾಡ್ಕೋತೀಯಾ ಮಾಡ್ಕೊ'' ಎಂದು ರೋಪ್ ಹಾಕಿ ದಡಬಡ ಅಂತ ನಡೆದು ಬಿಡೋಂವ.


ಈಗ ಈ ಸಾಲಗಾರ ಬುದ್ಧಿವಂತನಾಗಿದ್ದಾನೆ. ಸಾಲದ ದುಡ್ನಲ್ಲಿ ಅದೂ ಇದೂ ಎಂತಾದ್ದೊ ದಂಧೆಗೆ ಇನ್‌ವೆಸ್ಟ್ ಮಾಡಿ ಮೈ ಕೈ ಕೆಸರು ಮಾಡ್ಕೊಳಲ್ಲ. ಬದಲಿಗೆ ರಾಜಕೀಯಕ್ಕೆ ಹಾಕ್ತಿದ್ದಾನೆ. ತಾನೂ ಸಾಲ ಪಡೆದು ತನ್ನಂತಹ ಇತರರಿಗೂ ಸಾಲ ಕೊಡ್ಸಿ ಅವರನ್ನ ಅವ್ನ ಕಡೆ ಓಟಾಗಿ ತಿರುಗಿಸಿಕೊಳ್ತಿದ್ದಾನೆ. ಸಾಲದ ಹಣವನ್ನ ಗುಟ್ಟಾಗಿ ತನ್ನ ಹೆಂಡ್ತಿ ಮಕ್ಕಳ ಹೆಸರಿನಲ್ಲಿಟ್ಟು ಮಿಕ್ಕಿದ ಚಿಲ್ರೆ ಹಣ, ಬಾಯಿ-ಬಂಡ್ವಾಳ ಮಂದಿ ಮೇಲೆ ಇನ್‌ವೆಸ್ಟ್ ಮಾಡಿದ್ದಾನೆ. ಅವನ ಹತ್ರ ಅಂವನ್ದೂ ಅಂತ ಉಳಿಸ್ಕೊಂಡಿರೋದು ಅಂದ್ರೆ ಮೈಮೇಲಿರೊ ಶುದ್ಧ ಬಿಳಿ ತಿಳಿ

ಪಂಚೆ ಮತ್ತು ಅಷ್ಟೇ ಶುಭ್ರದ ಶರಾಯಿ ಮಾತ್ರ ಇಡೀ ಮುಳುಗಿದವನಿಗೆ ಚಳಿಯೇನು ಮಳೆಯೇನು ಎಂಬಂತೆ ಆಗಿದ್ದಾನೆ ಈಗ, ಜತೆಗೆ ನಾಲ್ಕೆಂಟು ಮಂದಿನ್ನ ಸದಾ ಇಟ್ಕೊಂಡು ಕಣ್ಣಿಗೆ ಕರಿ-ಚಾಳೀಸು ಹಾಕ್ಕೊಂಡು ಪಂಚೆ ಚುಂಗನ್ನ ಎಡಗೈಲಿ ಹಿಡಿದು ತಲೆ ಎತ್ತಿ ಅದೇ ಬ್ಯಾಂಕಿನೆದುರಗಡೆಯಲ್ಲೆ ಹೋಗ್ತಾ ಇದ್ರೂ, ಮ್ಯಾನೇಜರು ತಲೆ ತಗ್ಗಿಸಿಕೊಂಡು ಓರೆಗಣ್ಣಿನಿಂದ ಅವನು ಹೋಗುವುದನ್ನು ನೋಡಿ ಸುಮ್ಮನಾಗಬೇಕಾಗಿದೆ.

ಬ್ಯಾಂಕಿನೋರು ಮನಸ್ನಲ್ಲೇ ಅಂದ್ಕೊಳ್ಳಬಹುದು ಒಂದಲ್ಲ ಇನ್ನೊಂದ್ಹೊತ್ತು ಅವನು ಸಾಲ ಕೇಳ್ಲಿಕ್ಕೆ ಬಂದೇ ಬರ್ತಾನೆ ಆಗವನ ಕುತ್ಗೆ ಒತ್ತಿದ್ರೆ ಸರಿ ಅಂತ ಊಹುಂ ನಮ್ ಊಹೆ ತಪ್ಪು. ಆತ ಇನ್ನೆಂದೂ ನಮ್ಮಲ್ಲಿ ಸಾಲ ಕೇಳ್ಲಿಕ್ಕೆ ಬರೋದೆ ಇಲ್ಲ. ತನ್ನ ಸಾಲವನ್ನು ಮನ್ನಾ ಮಾಡಿಸ್ಕೊಂಡು ಇತರರಿಗೆ ಸಾಲ ಕೊಡಿಸ್ಲಿಕ್ಕೆ ಬರ್ತಾನೆ, ಅಲ್ಲೆ ಕಮಾಯಿಸ್ತಾನೆ, ಬ್ಯಾಂಕಿಗೂ ಸಾಲ ವಸೂಲಿಗೆ ಸಹಾಯ ಮಾಡ್ದಂಗ ಮಾಡಿ ಸಾಲಗಾರನಿಗೂ ಕೈಗೆ ಹಣ ಸಿಗೂಹಂಗ ಮಾಡಿ ಸಾಲ ರಿನಿವಲ್ ಮಾಡಿಸ್ತಾನೆ. ಒಂದು ವೇಳೆ ಅದೇ ಊರ್ನಲ್ಲಿ ನಾವೇ ಇದ್ದಿದ್ದ್ರೆ ಆತನ ಇಲೆಕ್ಷನ್‌ಗೆ ನಿಂತಾಗ ಆತ ನಮ್ಮೊಂದು ಓಟನ್ನು ಪಡ್ದೂ ಪಡೀತಾನೆ.

ಅಂಜಿಕಿನ್ಯಾತಕಯ್ಯಾ....?!

ಪಂಚ್ ಕೃಪೆ



ನೋಡ್ರೀ, ಈ ಕಾರ್ ನಿಮಗೆ ಸರಿಬೀಳ್ದೇ ಇದ್ರೆ,
ಹಿಂದಕ್ ತನ್ನಿ. ಬೇರೇ ಟೋಪಿ ಹಾಕ್ತೀವಿ

ಪುಸ್ತಕ ಪರಿಚಯ

''ತೇಲ್‌ನೋಟ'' (ವಿನೋದ, ವ್ಯಂಗ್ಯ ಬರಹಗಳು)

ಪುಟ: VIII+150 ಬೆಲೆ: 50-00 ರೂ. 1999

ಲೇ: ಕು.ಗೋ. ಪ್ರಕಾಶನ: ಸು.ಹಾ.ಸಂ., ವಾಗ್ದೇವಿ, ಹಯಗ್ರೀವನಗರ, ಉಡುಪಿ - 576 102

ಸಾಹಿತ್ಯ ವಲಯದಲ್ಲಿ ಕು.ಗೋ. ಎಂದೇ ಚಿರಪರಿಚಿತರಾದ ಉಡುಪಿಯ ಹೆಚ್. ಗೋಪಾಲ ಭಟ್ಟರು ಸುಮಾರು ಮೂರೂವರೆ ದಶಕದ ನಂತರ ಈಗ ಮತ್ತೊಂದು ಹಾಸ್ಯ ಪ್ರಬಂಧಗಳ ಸಂಕಲನ ನೀಡಿದ್ದಾರೆ. 1964ರಷ್ಟು ಹಿಂದೆಯೇ ಗೊರೂರು ರಾಮಸ್ವಾಮಿ ಅಯ್ಯಂಗಾರರ ಬೆಲೆಯುಳ್ಳ ಮುನ್ನುಡಿಯೊಂದಿಗೆ 'ಅಕ್ಕನ ಮದುವೆ' ಎಂಬ ಅಪ್ಪಟ ಹಾಸ್ಯ ಪ್ರಬಂಧಗಳ ಸೊಗಸಾದ ಪುಸ್ತಕ ಪ್ರಕಟಿಸಿದ್ದರು. ಹಳೆಯ ತಲೆಮಾರಿನವರಂತೆ ತೋರಿದರೂ, ಇವರ ಬರವಣಿಗೆ ಕಾಲಪ್ರವಾಹದೊಂದಿಗೆ ಸಹಜ ಸ್ಪಂದನವಿರಿಸಿಕೊಂಡಂತೆ, ಹಾಸ್ಯದ ಹೊನಲಿನೊಂದಿಗೆ ವೈಚಾರಿಕೆ-ವಿಡಂಬನೆಯನ್ನೂ ಅಳವಡಿಸಿಕೊಂಡು ಚೇತೋಹಾರಿಯಾಗಿ ಬಂದದ್ದು ಇಲ್ಲಿ ಮುಖ್ಯ.

'ತೇಲ್‌ನೋಟ' ಮೂವತ್ತಾರು ಹರಟೆ / ಹಾಸ್ಯ ಬರಹಗಳನ್ನೊಳಗೊಂಡ ಕೃತಿ. ಸಾರಾ - ಸಗಟಾಗಿ ಇದಕ್ಕೆ ವಿನೋದ, ವ್ಯಂಗ್ಯ ಬರಹಗಳೆಂದು ಏಕೆ ಕರೆದರೋ. ಇಲ್ಲಿ ತುಟಿ ಮೀರದ ನಗೆ ತುಳುಕಿಸುವ ಹಾಸ್ಯ ಬರಹಗಳಿವೆ; ಭ್ರಷ್ಟ ವ್ಯವಸ್ಥೆಯನ್ನು ಅಣಕಿಸುವ ವಿಡಂಬನೆಗಳಿವೆ; ಮನುಷ್ಯನ ಸಣ್ಣ ನಡವಳಿಕೆಯನ್ನೇ ಹಿಡಿದುಕೊಂಡು ಸೊಗಸಾದ ಹರಟೆಯನ್ನೂ ಹೊಡೆದ ಲಘು ಬರಹಗಳಿವೆ; ಅಲ್ಲಲ್ಲಿ ಅಷ್ಟಿಷ್ಟು ಜೀವದರ್ಶನ ಮಾಡಿಸುವ ಲಲಿತ ಪ್ರಬಂಧವೆನ್ನಬಹುದಾದ ಬರಹಗಳೂ ಇಲ್ಲಿ ಸೇರ್ಪಡೆಯಾಗಿವೆ. ಅಷ್ಟೂ ಸಾಲದೆಂಬಂತೆ ಲೇಖಕ ಸ್ವತಃ ಕತೆಗಾರನೂ ಆಗಿದ್ದರಿಂದಾಗಿ, ಗೊರೂರರ ಧಾಟಿಯಲ್ಲಿ ಕೆಲವು ವ್ಯಕ್ತಿಚಿತ್ರಗಳನ್ನೂ ನೀಡಲು ಪ್ರಯತ್ನಿಸಿದ್ದಾರೆ.

ಕು.ಗೋ. ತಮ್ಮ ಈ 'ತೇಲ್‌ನೋಟ' ದಲ್ಲಿ ಶೀರ್ಷಿಕೆಗೆ ತಕ್ಕಂತೆಯೇ ಸುತ್ತಣ ಪ್ರಪಂಚದ ಮೇಲು ನೋಟಕ್ಕೆ ದಕ್ಕಿದ ಸಂಗತಿಗಳನ್ನೇ ವಿನೋದ - ವಿಡಂಬನೆಯ ಶೈಲಿಯಲ್ಲಿ ತೇಲಿಬಿಟ್ಟಿದ್ದಾರೆ. ಲೇಖಕ ಬಾಲ್ಯದಿಂದಲೇ ತುಸು

ಅಲೆಮಾರಿಯಾಗಿದ್ದರಿಂದಲೋ ಏನೋ, ಇವರ ಬರವಣಿಗೆಗೆ ನಗೆಬರಹದ ಸೀಮಿತತನ ಮೀರಿದ, ಪ್ರಬಂಧದ ವ್ಯಾಪ್ತಿಗೆ ಬೇಕಾದ ಅನುಭವದ ಹರಹೂ ದಕ್ಕಿದೆ. ಆ ಕಾರಣಕ್ಕಾಗಿ, ಕು.ಗೋ. ಸಮರ್ಥ ಪ್ರಬಂಧಕಾರರ ಸಾಲಿನಲ್ಲಿ ನಿಲ್ಲಬಲ್ಲ ಲೇಖಕರು. ಇಲ್ಲಿ ಕೂಡ ರಥೋತ್ಸವ, ಅವಸರವಿಲ್ಲ, ನನ್ನ ಹುಚ್ಚಿನ ಫಲ, ಒಂದು ಪಯಣಗಳಂಥ ಸುಂದರ ಪ್ರಬಂಧಗಳನ್ನು ಕೊಟ್ಟಿದ್ದಾರೆ. ಆಯಾ ಲೇಖಕನ ವೃತ್ತಿ - ಪ್ರವೃತ್ತಿಗಳು, ಆತನ ಬರವಣಿಗೆಯಲ್ಲಿ ಹೇಗೆ ಅಪರಿಹಾರ್ಯವಾಗಿ ಬಂದುಬಿಡುತ್ತವೆನ್ನುವದಕ್ಕೆ ಇವರೂ ಹೊರತಾಗಿಲ್ಲ. ತಾವು ಹತ್ತಿರದಿಂದ ಬಲ್ಲ ಹೋಟೆಲು ಉದ್ದಿಮೆ ಹಾಗೂ ವಿಮಾ ಕ್ಷೇತ್ರಗಳು ಕು.ಗೋ.ರ ಬರವಣಿಗೆಯಲ್ಲಿ ಆಪ್ತವಾಗಿ ಬಂದುಬಿಡುತ್ತವೆ. ಅವರ ಹಾಸ್ಯ ಪ್ರಬಂಧಗಳ ಕೆಲವು ಮಾದರಿಗಳು:

ಏಕೋಪಾಧ್ಯಾಯ ಶಾಲೆಗೆ ಮುಖ್ಯೋಪಾಧ್ಯಯರಂತೆ ಅಪ್ಪೂರಾಯರ ಹೋಟೆಲಿಗೆ ಅವರೇ ಸಾಹುಕಾರ್ರು, ಕ್ಯಾಶಿಯರ್, ಸಪ್ಲೈಯರ್, ಕ್ಲೀನರ್, ಕುಕ್ ಹಾಗೂ ಇನ್ನೇನೇನೋ! ಕುಟುಂಬ ಯೋಜನೆಯ ಕೆಂಪು ತ್ರಿಕೋನ ಅವರ ತಂಟೆಗೆ ಹೋದ ಹಾಗೆ ಕಾಣುವುದಿಲ್ಲ. ಅದರ ಫಲವಾಗಿ ತುಂಬ ಮಕ್ಕಳಿದ್ದಾರಂತೆ.

ಕ್ರಿಕೆಟ್ ಗೇಮ್ ಇನ್‌ಡೋರ್ ಗೇಮ್ ಆಗಿ ಮಕ್ಕಳು ಎಗರಿಸಿದ್ದ ಚೆಂಡು ಕನ್ನಡಿಯ ಕೆಲವು ಭಾಗಗಳಲ್ಲಿ ಬಿರುಕುಗಳನ್ನು ನಿರ್ಮಿಸಿತ್ತು. ತುಂಡಾದ ಜಾಗಕ್ಕೆಲ್ಲ Insure and be secure ಮಮತೆಯ ಪ್ರತೀತ ಜೀವವಿಮೆ, ನಿಮಗಾಗಿ ಉಳಿಸಿ, ಎಂಬಿತ್ಯಾದಿ ಎಲ್ಲೈಸಿಯ ಸ್ಟಿಕ್ಕರ್‌ಗಳನ್ನು ಅಂಟಿಸಿದ್ದೆ. ಮೈತುಂಬ ಬ್ಯಾಂಡೇಜ್ ಧರಿಸಿದ್ದ ರೋಗಿಯಾಗಿತ್ತು ಆ ಕನ್ನಡಿ.

(ಅ)ನಾಗರಿಕ ಕ್ರಿಯಾ ಸಮಿತಿಯ ಕಾರ್ಯದರ್ಶಿ ತಿಮಿರಣ್ಣನಿಗೆ ನರಕಪಾಲಿಕೆ ಅಲ್ಲ ನಗರಪಾಲಿಕೆ ಕಮೀಷನ್ ಸಾಹೇಬ್ರ ವತಿಯಿಂದ ಬರೆಸಲ್ಪಟ್ಟ ಓಲೆ. ... ಗದ್ದೆಗಳು ಬೆಳೆ ಬೆಳೆಯುವುದನ್ನು ಬಿಟ್ಟು ಕಟ್ಟಡಗಳನ್ನು ಹೊರಲು ತಯಾರಾಗಿರುವಾಗ, ಇನ್ನು ಪರಿಸರ ಪರಿಸರ ಅಂತ ಪರಿತಪಿಸಬೇಡಿ. ಪರಿಸರಕ್ಕೆ ಗೊತ್ತು ತನ್ನನ್ನು ಹೇಗೆ ಇಟ್ಟುಕೊಳ್ಳಬೇಕು ಅಂತ. ಈ ಕಸಮಯ ಪರಿಸರವೇ ರಸಮಯ ಪರಿಸರ ಅಂತ ಭಾವಿಸಬಾರದೇಕೆ? ನೀವೇ ಸೂಚಿಸಿದಂತೆ ಅಕ್ರಮ ಎಲ್ಲವೂ ಸಕ್ರಮವಾಗುವ ಕಾಲವಿದು. ಆದುದರಿಂದ ನಮ್ಮ ನಗರ ಹೇಗೆ ಇದೆಯೋ ಹಾಗೆಯೇ ಅದನ್ನು ಸ್ವೀಕರಿಸಿ. ಮೂಗು ಮಾತ್ರವಲ್ಲ, ಬಾಯಿ - ಕಣ್ಣನ್ನೂ ಮುಚ್ಚಿಕೊಂಡು ಬದುಕಲು ಕಲಿಯಿರಿ. ಈ ದಿಸೆಯಲ್ಲಿ ನಿಮ್ಮ ಓರಾಟ ಮುಂದುವರಿಯಲಿ. ಎಷ್ಟೆಂದರೂ ನಮ್ಮದು ಸಿಂಗಾಪುರವಲ್ಲವಲ್ಲ?


ಬೆನ್ನು ತುರಿಸಿಕೊಳ್ಳಲು ಆಗುತ್ತೆ ಬೀಗದಕ್ಕೆ ಗೊಂಚಲು ನೇತಾಡಿಸಲೂ ಆಗುತ್ತೆ ಎಂದು ಅರೆಳೆಯ ಜನಿವಾರ ಅವನ ಮೈಮೇಲೆ ತೂಗಾಡತೊಡಗಿತು.

ಮಾಧುರಿ, ಮಮತಾ, ಕಾಜೋಲ್, ಕರೀಷ್ಮಾ, ಸುಶ್ಮಿತಾ, ಸೌಂದರ್ಯರ ಎದೆ ಬಿರಿಯುತ್ತಿರುವಾಗ ಕಣ್ಣು ಬಾಯಿ ಬಿಡುವವರಿಗೇನು ಕಡಿಮೆಯೆ?

ದವಡೆ ಊದಿ ಯಾವ ಚಿಕಿತ್ಸೆಗೂ ಹಲ್ಲುನೋವು ಬಗ್ಗದೆ ನನ್ನನ್ನು ಜಗ್ಗಿಸಿದಾಗ ಹಲ್ಲು ಮುರಿಯುವವರ 'ಶಾಪ'ಕ್ಕೆ ಹೊಗಲೇಬೇಕಾಯಿತು. ಅಲ್ಲಿ ನನ್ನ ಸರದಿ ಬರುವವರೆಗೂ ಕಾಯಲೇಬೇಕಾಯಿತು. ಹಣೆಯ ಮೇಲೂ ಒಂದು ಕಣ್ಣಿಟ್ಟುಕೊಂಡಿದ್ದ ವೈದ್ಯರು ಮಂಚದಂಥ ಕುರ್ಚಿಯಲ್ಲಿ ಕೂರಿಸಿ ಮಲಗಿಸಿದರು.

– ಈರಪ್ಪ ಎಂ. ಕಂಬಳಿ

ಪಂಚ್ ಕೃಪೆ



ಬೇರೇ ಏನೂ ಡಿಫೆಕ್ಟ್ ಕಂಡುಹಿಡೀದೇನೇ ಇದನ್ನ ರಿಪೇರಿ ಮಾಡುಕ್ಕಾಗುತ್ಯೇ?

ವೈದ್ಯರಿಗೆ ಬಾಯ್ದೊಳು.....

– ಡಾ|| ಶ್ರೀ ವೆಂಕಟರಮಣ

ಕಳೆದವಾರ ನನ್ನ ಪ್ರತಿಯೊಂದು ಹಲ್ಲೂ ದಿನಕ್ಕೊಂದರಂತೆ ಕಿರುಕುಳ ಕೊಡಲಾರಂಭಿಸಿದಾಗ ನಿರ್ವಾಹವಿಲ್ಲದ ತಾನು ದಂತವೈದ್ಯರ ಬಳಿಗೆ ಹೋದೆ. ಅವರು ಬಾಯಿಯನ್ನು ಬಿಚ್ಚಿಸಿ ಸಮಗ್ರವಾಗಿ ಪರಿಶೀಲಿಸಿದರು. ಅಲ್ಲವರು ಏನೇನನ್ನು ಕಂಡರೋ ನಾನರಿಯೆ. ಆದರೂ ಅವರ ಮುಖಚರ್ಯೆಯಿಂದ ಅವರು ಕಂಡ ದೃಶ್ಯ ಮನೋಹರವಾಗಿರಲಿಲ್ಲವೆಂಬುದನ್ನು ಮಾತ್ರ ಯಾರು ಬೇಕಾದರೂ ಸುಲಭವಾಗಿ ಊಹಿಸಬಹುದಿತ್ತು!

ನನ್ನ ಕೆಳ ದವಡೆಯ ಎದುರಿನ ಎರಡು ಹಲ್ಲುಗಳು ನಾಪತ್ತೆಯಾಗಿದ್ದುದರಿಂದ ವೈದ್ಯರಿಗಲ್ಲಿ ಗೇಟ್‌ವೇ ಆಫ್ ಇಂಡಿಯಾ ತೋರಿರಬೇಕು. ಬಾಯಿ ತೆಗೆದರೆ ಸಾಕು, ವಾತಾವರಣದ ಯಾವತ್ತೂ ಹಾರು ವಸ್ತುಗಳಿಗಲ್ಲಿ ಮುಕ್ತ ಪ್ರವೇಶವಿತ್ತು! ಪಕ್ಕದ ಕೋರೆಯೊಂದು ನಿದ್ದೆಮಂಪರಿನಲ್ಲಿ ಮಾಲಿರುವ ಪಹರೆಯವನಂತೆ ಡಾಕ್ಟರಿಗೆ ಗೋಚರಿಸಿದ್ದರೆ ಅದರಲ್ಲಿ ಸೋಜಿಗವಿರಲಿಲ್ಲ. ಕೋರೆಯ ಸಂದಿಗೊಂದಿಯನ್ನವರು ಸೂಕ್ಷ್ಮದರ್ಶಕದಿಂದ ಪರೀಕ್ಷಿಸಿದರು. ಅಲ್ಲೆಷ್ಟು ಅತಿಕ್ರಮಣಕಾರರು ಅವಿತಿದ್ದರೋ? ಇವರ ಭಯದಿಂದಲೋ ಎಂಬಂತೆ ಪಕ್ಕದ ಹಲ್ಲೊಂದು ಗಡಗಡ ನಡುಗುತ್ತಿತ್ತು. ಇದು ವೈದ್ಯರ ಗಮನವನ್ನು ಬೇಗನೆ ಸೆಳೆಯಿತು. ಹಲ್ಲುಗಳ ಮಾಲಿಕನತ್ತ ಅವರೊಮ್ಮೆ ಅರ್ಥಗರ್ಭಿತ ನಗೆ ಬೀರಿದರು ಕೂಡಾ. ಪಕ್ಕದ ಇನ್ನೆರಡು ಮೂರು ದಂತಗಳು ಬೇರೆ ಬೇರೆ ಬಣ್ಣ ತಳೆದಿದ್ದುದನ್ನೂ ಅವರು ಪ್ರಸ್ತಾಪಿಸಿದರು. ಆದರೆ ವಕ್ತ್ರವನ್ನು ವಿಶಾಲವಾಗಿ ತೆರೆದಿರುವಾಗ ಉತ್ತರ ನೀಡುವುದು (ಕ್ಷಮೆ ಕೇಳುವುದು ಕೂಡಾ!) ಸುಲಭವಲ್ಲ ತಾನೇ? ನಾನೇನೋ ಕಷ್ಟಪಟ್ಟು ಅಸಂಭದ್ಧವನ್ನು ಅಷ್ಪಷ್ಟತೆಯೊಡನೆ ಬೆರೆಸಿ ಉಸುರಿದೆ. ವೈದ್ಯ ಮಹಾಶಯರದನ್ನು ಗೊಡವೆಗೆ ತೆಗೆದುಕೊಳ್ಳಲೇ ಇಲ್ಲ. ಅವರ ಸೂಕ್ಷ್ಮದರ್ಶನ ನನ್ನ ವಕ್ರದಂತದ ಪಂಕ್ತಿಯುದ್ದಕ್ಕೂ ನಿಧಾನವಾಗಿ ಇತ್ತಿಂದತ್ತ ಅತ್ತಿಂದಿತ್ತ ಸರಿಯಿತು. ಅವರೇನನ್ನು ಕಾಣುತ್ತ ಹೋದರೋ ಅದರ ವಿವರ ನಾಕಾಣೆ. ಆದರೆ ಅವರ ಮುಖವನ್ನೇ ದಿಟ್ಟಿಸುತ್ತಿದ್ದ ನನಗೆ ಅವರ ಭಾವನೆಗಳ ಅಂದಾಜು ಸಿಗದೆ ಹೋಗಲಿಲ್ಲ.


ಅಲ್ಲಿ ಬಾಯಿಯೊಳಗೆ ಮೇಲುದವಡೆಯ ಹಲ್ಲೊಂದು ತನ್ನ ಆಯ ಅಳತೆಗಳನ್ನು ಮೀರಿ ಕೆಳಗಿದ್ದ ಸಂದಿಗೆ ಚಾಚಿ ನಿಂತಿತ್ತು; ಅಕ್ಕಪಕ್ಕದ ಖಾಲಿ ಜಾಗಗಳನ್ನು ಅತಿಕ್ರಮಿಸುವ ಜನರ ಸ್ವಭಾವವನ್ನಿದು ಅಣಕಿಸುತ್ತಿತ್ತು. ವೈದ್ಯರು ಈ ಹಲ್ಲಿಗೆರಡು ಏಟುಹೊಡೆದು 'ನೋವಿದೆಯೇ?' ಎಂದಾಗ ಶಬ್ದರೂಪದ ಉತ್ತರ ಕೊಡಲಾಗದ ಸ್ಥಿತಿಯಲ್ಲಿದ್ದ ನಾನು 'ಹೌದೆಂ'ಬಂತೆ ತಲೆಯಲ್ಲಾಡಿಸಿದೆ. ನನ್ನ ತುಟಿಯ ಕಪ್ಪನ್ನು ಗಮನಿಸಿಯೋ ಏನೋ 'ಸಿಗರೇಟು ಸೇದುತ್ತೀರಾ?' ಎಂದು ಪ್ರಶ್ನಿಸಿದರು ದಂತಪರೀಕ್ಷಕರು. ಈ ಕೃತ್ಯವನ್ನೆಸಗಿದ ಹಳೆಯ ಅಪರಾಧಿ ನಾನು! 'ಬೇಗನೆ ಸಾವು ಬೇಕೇ, ಸೇದುವುದನ್ನು ಬಿಡುತ್ತೀರಾ?' ಎನ್ನುವ ಕೊನೆಯಚ್ಚರಿಕೆ ಬರುವವರೆಗೂ ಸೇದುವುದನ್ನು ಮುಂದುವರಿಸಿದ್ದ ನಾನು 'ಈಗಿಲ್ಲ' ಎನ್ನುವಂತೆ ತಲೆಯಲ್ಲಾಡಿಸಿದೆ. ಆಗ 'ಹಲ್ಲಿನ ಡಾಕ್ಟರರ ಬಳಿಗೆ ಹೋಗದೆ ವರ್ಷ ಎಷ್ಟಾಯಿತು?' ಎಂಬ ಮುಂದಿನ ಪ್ರಶ್ನೆ ಬಂತು. ಅಷ್ಟರಲ್ಲಿ ಉಗುಳು ನಿವಾರಿಸಲೆಂದು ಬಿಡುಗಡೆ ಬಂದಿದ್ದರಿಂದ 'ಹೋಗೋಣ, ಹೋಗೋಣವೆಂದೇ ಕಾಲ ತಳ್ಳುತ್ತ ಬಂದೆ. ಕೆಲಸದ ತುರ್ತಿನಲ್ಲಿ ಬಿಡುವಾಗುವುದೇ ಕಷ್ಟ, ಅದಲ್ಲದೆ ನಿಮ್ಮಂಥ ಸಮರ್ಥರ ಭೇಟಿ ದುರ್ಲಭ' ಎಂದು ಅವರಿಗೊಂದು ಹೊಗಳು ವಾಕ್ಯ ತೂರಿದೆ. ವೈದ್ಯರ ಮೇಲೆ ಈ ಮಾತು ಕೂಡ ಪ್ರಭಾವಬೀರಿದಂತೆ ತೋರಲಿಲ್ಲ.

ಡಾಕ್ಟರರು ಮತ್ತೆ ವಕ್ತ್ರವನ್ನಗಲಿಸಲು ಹೇಳಿ ಪರಿಶೀಲನಾ ಕಾರ್ಯ ಮುಂದುವರಿಸಿದರು. ಈ ಮಹಾಶಯರ ಬಳಿ ಒಂದೈವತ್ತು ವರ್ಷ ಮೊದಲು ಬಂದಿದ್ದರೆ ಮುದ್ದುಕೃಷ್ಣನ ಬಾಯಿಯಲ್ಲಿ ಗೋಪಿ ಕಂಡ ದೃಶ್ಯವನ್ನು ಹೋಲುವ ಸನ್ನಿವೇಶವಾದರೂ ಇರುತ್ತಿತ್ತು; ಹಾಳು ಹಂದಿಯ ಸ್ಥಿತಿಯಲ್ಲ. ಈಗಿದ್ದಿದ್ದು ದಯನೀಯ ಪರಿಸ್ಥಿತಿ. ಬಿದ್ದಿರುವ ಯಾ ಬೀಳಲು ತಯಾರಾಗಿರುವ ಶಭ್ರತೆಗೆ ದೂರದ ಹಲ್ಲುಗಳು. ಬಳಿ ಬಂದವರ ನಾಸಿಕವನ್ನು ಅಪಕರ್ಷಿಸುವ ವಾಸನೆಬೀರುವ ಸಂದಿಗೊಂದಿ. ವಿಶ್ವರೂಪದರ್ಶನ ಕಾಲದಲ್ಲಿ ಶ್ರೀಕೃಷ್ಣನ ಬಾಯಿಯಲ್ಲಿ ಅರ್ಜುನ ಕಂಡ ಕೆಲವು ಭಯಾನಕ ದೃಶ್ಯಗಳ ನೆನಪು ವೈದ್ಯರಿಗೆ ಬಹುಶಃ ಆಗಿರಬೇಕು! ನನ್ನ ಬಾಯಿಯ ಆಕಾಶದಲ್ಲಿ ಹಾವು, ಚೇಳು ಮತ್ತು ಸರೀಸೃಪಗಳನ್ನು ಭೂತಕನ್ನಡಿ ಅವರಿಗೆ ತೋರಿಸಿರಬೇಕು!!

ಅಷ್ಟರಲ್ಲಿ ಆಯಾಸ ಪರಿಹಾರಕ್ಕೆಂದು ನಾನೊಂದು ಬಾರಿ ಬಾಯಿಯನ್ನು ಗುಬಕ್ಕನೆ ಮುಚ್ಚಿದೆ. ಕಾಕತಾಳೀಯವೋ ಎಂಬಂತೆ 'ದಿನಕ್ಕೆಷ್ಟು ಬಾರಿ

ಹಲ್ಲುಜ್ಜುತ್ತೀರಿ?' ಎಂಬ ಪ್ರಶ್ನೆ ವೈದ್ಯರಿಂದ ಬಂತು. 'ಎರಡು ಬಾರಿ' ಎಂದು ಸುಳ್ಳು ಹೇಳಲು ನನಗೆ ಬಾಯಿ ಬರದಿದ್ದರಿಂದ 'ಅಲ್ಲ ಡಾಕ್ಟ್ರೇ, ಹಲ್ಲಿನ ಆರೋಗ್ಯಕ್ಕೆ ಯಾವ ಪೇಸ್ಟ್ ಒಳ್ಳೆಯದು? ಕಾಲ್ಗೇಟ್, ಸಿಬಾಕ, ಪ್ರಾಮಿಸ್, ನೀಮ್, ಕ್ಲೋಸ್‌ಅಪ್ ಅಥವಾ....? ಎಂದು ಪ್ರಶ್ನೆಯನ್ನು ಪ್ರಶ್ನೆಯಿಂದಲೇ ಎದುರಿಸಲು ಹವಣಿಸಿದೆ ನಾನು. ಆಗವರು ನಸುನಗುತ್ತ, 'ಸ್ವಾಮೀ, ಪೇಸ್ಟ್ ಮುಖ್ಯವಲ್ಲ. ಹಲ್ಲುಜ್ಜುವ ವಿಧಾನ, ಆವೃತ್ತಿ ಮತ್ತು ಬ್ರಶ್ ಗುಣ ಮುಖ್ಯ'ವೆಂದರು. ಇದನ್ನು ಕೇಳಿಸಿಕೊಂಡ ನನಗೆ ಕುಳಿತಿದ್ದ ಆಸನ ಕುಸಿಯುತ್ತಿದ್ದಂತೆ ಭಾಸವಾಯಿತು. ಯಾಕೆಂದರೆ ನನ್ನ ಅಚಲ ನಂಬಿಕೆಯೊಂದಕ್ಕೆ ಬಲವಾದ ಏಟು ಬಿದ್ದು, ಪರಿಸ್ಥಿತಿ ಉಲ್ಟಾಪಲ್ಟಾ ಆಗಿತ್ತು. ವೈದ್ಯ ಮಹಾಶಯರು ಮುಂದುವರಿಸುತ್ತ ನನ್ನ ದಂತಗಳ ಪುನರ್ವಸತಿ ಕಾರ್ಯಕ್ರಮದ ವಿವಿಧ ಹಂತಗಳನ್ನು ವಿವರಿಸುತ್ತ ಹೋದರು. ಅವುಗಳಲ್ಲಿ ನಾನೆಷ್ಟನ್ನು ಕೇಳಿಸಿಕೊಂಡೆ, ಇನ್ನೆಷ್ಟನ್ನು ಅರ್ಥಮಾಡಿಕೊಂಡೆ ಎನ್ನುವುದು ಕಷ್ಟ! ಒಟ್ಟಿನಲ್ಲಿ ನಾನು ಅದಂತನಾಗುವುದನ್ನು ಮುಂದೆ ಹಾಕಲು ಅವರೀಗ ಹೆಣಗಬೇಕಾದ್ದು ಅನಿವಾರ್ಯವಾಗಿತ್ತು!!

ಪಂಚ್ ಕೃಪೆ



ನಾನು ಸಾಮಾನ್ಯವಾಗಿ ಕೈ ತೋರಿಸ್ದೋರಿಗೆಲ್ಲಾ
ಲಿಫ್ಟ್ ಕೊಡೋಲ್ಲ

ಸ್ಮರಣೆ

ವೈ.ಎನ್.ಕೆ. ಮತ್ತು ಗುಂಡು

– ಶಿವಸ್ವಾರ್

ಅತ್ಯುತ್ತಮ ಪತ್ರಕರ್ತ, ಅದರಲ್ಲೂ ಒಳ್ಳೆ ಸಂಪಾದಕ, ಒಳ್ಳೆ ವಿಮರ್ಶಕ ಅಂದ್ರೆ ಕಟು ವಿಮರ್ಶಕ ಕೂಡ. ಪ್ರತಿಭೆಯನ್ನು ಮೊದಲ ನೋಟಕ್ಕೆ ಗುರುತಿಸುವ ತೀಕ್ಷ್ಣ ಕಣ್ಣು. ಹೀಗಾಗಿ ಎಷ್ಟೊಂದು ಪ್ರತಿಭಾ ವ್ಯಕ್ತಿಗಳನ್ನು ಮುಂದೆ ತಂದರು. ವೈ.ಎನ್.ಕೆ. ಮೂಲಕ ತಾವು ಇಂದಿನ ಎತ್ತರಕ್ಕೆ ಬಂದಿದ್ದು ಎಂದು ಹೇಳಿಕೊಳ್ಳುವ ಕಲಾವಿದರ ಸಂಖ್ಯೆ ಅಪಾರ. ಇದು ವ್ಯಕ್ತಿಯ ಚಿತ್ರಣವನ್ನು ಇಡಿಯಾಗಿ ನಮ್ಮ ಮುಂದಿಡುತ್ತದೆ. ಗುಂಡಿನ ಗುಮ್ಮತ್ತಿನ ಬಗ್ಗೆ ವೈ.ಎನ್.ಕೆ. ವ್ಯಾಖ್ಯಾನ ಕೇಳುವುದೇ ಒಂದು ಅನುಭವ. ಅವರ ಒಂದು ಸಂಕಲನ ಮದ್ಯಕ್ಕೆ ಮೀಸಲು 'ತೀರ್ಥರೂಪ' ಪದಗಳನ್ನು ಒಡೆದು ಹೊಸ ಹೊಸ ಅರ್ಥವನ್ನು ಕೊಡುವುದು ಅವರಿಗೆ ಕ್ರೀಡೆ. 'ಪನ್' ಅನ್ನು ಅಷ್ಟು ಪರಿಣಾಮಕಾರಿಯಾಗಿ ಬಳಿಸುವ ಸಾಮರ್ಥ್ಯ ವೈ.ಎನ್.ಕೆ.ಗೆ ಸಲೀಸಾಗಿ ಸಾಧ್ಯವಾಗಿದ್ದು ಅದರ ಇಂಗ್ಲೀಷ್ ಹಾಗೂ ಕನ್ನಡ ಭಾಷೆಯ ಮೇಲಿನ ಪ್ರಭುತ್ವ 'ಗುಂಡಿಗೆ' ಎಂಬ ಹನಿಗವನದಲ್ಲಿ

ಎಲ್ಲವನ್ನೂ
ಎದುರಿಸುವ
'ಗುಂಡಿಗೆ'
ನೀಡುವ
ಶಕ್ತಿ
ಇರುವುದು
'ಗುಂಡಿ'ಗೆ

ಹಾಗೆ ವೈ.ಎನ್.ಕೆ. ಸಾವಿತ್ರಿ ಬಗ್ಗೆ ಹೇಳುತ್ತಾ ಸತ್ಯಾವಾನ್‌ಗೆ 'ಸಾವ್ – ಇತ್ರಿ' ಅದು ಅವನಿಗೂ ಗೊತ್ತಿತ್ರಿ ಅನ್ನುತ್ತಾ ಒಂದೇ ಪದದಲ್ಲಿ ಅಡಗಿರುವ ಅನೇಕ ಅರ್ಥಗಳನ್ನು ಹೊರಗೆಡುಹುತ್ತಾರೆ. ಪ್ರಸಿದ್ಧ ಫ್ಯಾನ್ಸಿನ ಮದ್ಯ 'ಪರ್ನೋಡ್' ಎಂದು ಒಬ್ಬ ಗುಂಡ ಹೇಳಿದಾಗ "ಅದು ಪರ್ನೊ ಕಣೊ, ಡಿ ಸೈಲೆಂಟ್" ಎಂದು ಇನ್ನೊಬ್ಬ ಗುಂಡ ತಿದ್ದಿದ. ಆಗ ಬಂದ ಪ್ರತಿಕ್ರಿಯೆ 'ಡಿ' ಏನು. ಅದು ಕುಡಿದರೆ ನೀನೂ ಸೈಲೆಂಟ್ ಆದರೆ ಒಂದೆರಡರ ಬಳಿಕ 'ವೈಲೆಂಟ್' ಇಂದು ವೈ.ಎಸ್.ಕೆ. ಯ ಮತ್ತೊಂದು ಗುಂಡಿನ ಪದ್ಯ.

ಬಿ.ಎಂ.ಶ್ರೀಯವರ ಅತ್ಯಂತ ಪ್ರಖ್ಯಾತ 'ಕರುಣಾಳು ಬಾ' ಪದವನ್ನು ಬಾ(ರ್) ಅಂತ ಬ್ರಾಕೆಟ್‌ನಲ್ಲೆ ಗುಂಡಿನ ಪದ್ಯವನ್ನಾಗಿ ತಿರುಗಿಸಿದ್ದಾರೆ.....ಮುಸುಕಿದೀ PUB ಇನಲಿ ಕೈ ಹಿಡಿದು ಕುಡಿಸೆನ್ನನು ಎಂದು ಕುಡುಕನೊಬ್ಬನ ಪ್ರಾರ್ಥನೆ. ಮಬ್ಬಿನಲಿ ಪಬ್ಬಿನಲ್ಲಿ ಮಾರ್ಪಡಾಗಿ 'ನಡೆಸೆನ್ನನು' ಎಂಬ ಕೋರಿಕೆ 'ಕುಡಿಸೆನ್ನನು' ಎಂದಾಗಿದೆ. ಅತಿಕಮ್ಮಿ ಬದಲಾವಣೆಯಿಂದ ಅತ್ಯಂತ ರಸವತ್ತಾದ ಅರ್ಥಬೇಧವನ್ನು ಕೊಡಬಲ್ಲವರಗಿದ್ದವರು.

'ಸದಾ' ಎನ್ನುವ ಮತ್ತೊಂದು ಗುಂಡಿನ ಕಾವ್ಯಧಾರೆ ಹೀಗಿದೆ

ಬೆಳಗ್ಗೆ, ಸಂಜೆ, ಮಧ್ಯಾಹ್ನ

ಕುಡೀತೀನಿ ನಾನು ಮದ್ಯಾನಾ

ವೈ.ಎನ್.ಕೆ. ಮನೆ 'ರಾಧಿಕಾ' ದಲ್ಲಿ ಕ್ರಿಯಾಶೀಲರೆಲ್ಲರ ಸಭೆಗಳು ನಿರಂತರವಾಗಿ ನಡೆಯುತ್ತಿದ್ದನ್ನು ಅನೇಕ ಕಲಾವಿದರು ಜ್ಞಾಪಿಸಿಕೊಳ್ಳುತ್ತಾರೆ. ಕಲಾ ಚಿತ್ರಗಳು ತಯಾರಿ ಸಿದ್ಧತೆಗಳು ನಡೆದದ್ದು ಅಲ್ಲೆ. 'ಸಂಸ್ಕಾರ' 'ಹಂಸಗೀತೆ' ವಂಶವೃಕ್ಷ ಹೀಗೆ ಅನೇಕ ಚಿತ್ರಗಳ ಬಗ್ಗೆ ಚರ್ಚೆ ಇತ್ಯಾದಿ ಚಟುವಟಿಕೆಗಳ ಆಗರ. ಅಲ್ಲಿ ವೈ.ಎನ್.ಕೆ. ಹೇಳುತ್ತಿದ್ದುದು ಒಂದು ಕೊಠಡಿ 'ಗುಂಡು'ರೂಮ್ ಇನ್ನೊಂದು ಸ್ಕ್ವೇರ್ (Square) Room. ಗುಂಡಿನ (ಗ) ಮತ್ತಿನಲ್ಲಿ ಏಳಲು ಒಬ್ಬರು ಕಷ್ಟಪಡುತ್ತಿದ್ದಾಗ ವೈ.ಎನ್.ಕೆ. ಹೇಳುತ್ತಿದ್ದುದು "Why do you get up, while the room is in motion".


ಅಮೆರಿಕಾ ಪ್ರವಾಸದಿಂದ ಬರುವಾಗ ನೆಪೋಲಿಯನ್ ಕುಡಿಯುತ್ತಿದ್ದ 'ಕುರ್ಬೋಸಿಯರ್' ತರುತ್ತೇನೆಂದು ಗೆಳೆಯರಿಗೆ ಹೇಳಿದ್ದು, ಹಾಗೆ ತಂದಿದ್ದರೂ ಕೂಡ. ಆದರೆ ವೈ.ಎನ್.ಕೆ. ಅದನ್ನು ಓಪನ್ ಮಾಡಲು ಉಳಿಯಲಿಲ್ಲ. ಗುಂಡಿನ ವಿಷಯದಲ್ಲಿ ವೈಯನ್ಕೆದು ಸಿಪಾಯಿಯ ಶಿಸ್ತು. ದಿನಾ ಗುಂಡು ಹಾಕಿದರೂ ಅತ್ಯಂತ ವ್ಯವಸ್ಥಿತ. ಸಮಯವಾಯಿತೆಂದರೆ ಯಾರನ್ನೂ ಲೆಕ್ಕಿಸದೆ ಹೊರಟುಹೋಗುತ್ತಿದ್ದರು. ಹೋಗುವಾಗ Listen to your body! ಎನ್ನುತ್ತಿದ್ದರು. ಗುಂಡು ಪಾರ್ಟಿಗಳಲ್ಲಿ ಜೋಕ್ ರಿಪೀಟ್ ಮಾಡಿದರೆ ರಿಪೀಟ್ ಮಾಡಬೇಕಾಗಿರುವುದು ಗುಂಡನ್ನು ಜೋಕನ್ನಲ್ಲ ಅಂತಿದ್ರು.

ಮಾತನ್ನು ಆಡುತ್ತಿದ್ದ ಸ್ಪೀಡ್ ಅಸಾಧ್ಯ. ಕುಡಿದಾಗ ಅಥವಾ ಕುಡಿಯದಿದ್ದಾಗ ವ್ಯತ್ಯಾಸವಿಲ್ಲ. ಮೆದುಳಿನಲ್ಲಿ ಬಂದ ಹಾಗೆ ಮಾತಿನಲ್ಲಿ ತಕ್ಷಣ ಇಳಿಸಿಬಿಡುತ್ತಿದ್ದರು. ಆಲೋಚನೆಯೂ ಹಾಗೆ. ಅಭ್ಯಾಸವಾದವರಿಗೆ ಮಾತ್ರ ಅವರ ಮಾತು ಬೇಗ ಅರ್ಥವಾಗುತ್ತಿತ್ತು. ವೇದಿಕೆಯ ಮೇಲೆ ಮಾತಾಡದವರೇ

ಅಲ್ಲಿ ಪೆರಗುಗೊಳ್ಳುವಷ್ಟು ಜ್ಞಾಪಕಶಕ್ತಿ. ಕೈಲಾಸಂ ಒಮ್ಮೆ ಹೇಳಿದದರಂತೆ ''ನನ್ನ ನಾಟಕ ಎಲ್ಲೂ ಲಭ್ಯವಾಗದಿದ್ದರೆ ಕೃಷ್ಣಮೂರ್ತಿ ಅಂತಾ ಒಬ್ಬ ಹುಡುಗ ಇದಾನೆ ಅವನ ಹತ್ತಿರ ಹೋಗಿ ಅವನ ಬಾಯಲ್ಲೇ ಭದ್ರವಾಗಿದೆ''.

ನಮ್ಮನ್ನಗಲಿ ಒಂದು ವರ್ಷವಾಯ್ತು. ಈಗ ಉಳಿದಿರುವುದು ಅವರ ನೆನಪು ಹಾಗೂ ಅವರ 'ವಂಡರ್'ಫುಲ್ ಬರಹಗಳು.

ದಾಕ್ಷಿಣ್ಯಕ್ಕಾಗಿ, ಪ್ರಶಂಸೆ ಮಾಡುವುದಕ್ಕಾಗಲಿ ಸುಳ್ಳು ಹೇಳದೆ ಬಾಳನ್ನು ನಡೆಸಿದವರು. ಅವರ ಫೇಮಸ್ ನುಡಿಗಳು ''ಕುಡಿದರೆ ಕಳ್ಳು ಹೇಳಲಾರೆ ಸುಳ್ಳು''



ಪಂಚ್ ಕೃಪೆ

ಮಕ್ಕಳು ಮಲಗೋಕ್ಮುಂಚೆ ಯಾಕೆ ಆ ಚಾನಲ್ ಹಾಕ್ತಾರೋ ದೇವ್ರಿಗೇ ಗೊತ್ತು

ಹೇರ್ ಕಟಿಂಗ್ ಅನುಭವ

- ನೀರಗುಂದ ಕೇಶವಮೂರ್ತಿರಾವ್

ನಾನು ಪ್ರತಿ ತಿಂಗಳೂ ತಪ್ಪದೇ ಹೇರ್ ಕಟಿಂಗ್ ಮಾಡಿಸುವುದು ಲಾಗಾಯ್ತಿನಿಂದ ಬಂದ ಪದ್ಧತಿ. ಈ ಊರಿಗೆ ಬಂದಂದಿನಿಂದ ನನ್ನ ಖಾಯಂ 'ತಲೆಯ ತೋಟಗಾರ' (ಕ್ಷೌರಿಕ) ಬದಲಾದುದು ನೆನಪಿಲ್ಲ. ನನ್ನ ದಿವಂಗತ ಗೆಳೆಯನೊಬ್ಬ ''ಯಾವಾಗಲೂ ಒಬ್ಬನೇ ಹಜಾಮ, ಒಬ್ಬನೇ ಟೈಲರ್, ಒಬ್ಬನೇ ಧೋಬಿ, ಹೆಂಡತಿಯಂತೂ ಸರಿಯೇ ಸರಿ! ಇವರನ್ನು ಬದಲಿಸಲೇಬಾರದು'' ಎಂದು ಹೇಳುತ್ತಿದ್ದ.

ಈಚೆಗೆ ನನ್ನ ವಾಸ್ತವ್ಯವನ್ನು ಸ್ವಂತ ಮನೆ ಇರುವ ವಿಸ್ತರಣಕ್ಕೆ ಬದಲಾಯಿಸಿದಾಗ ನನ್ನ ತಿಂಗಳ 'ಕೆಲಸ'ಕ್ಕೆ ವಿಘ್ನ ಒದಗಿಬಂತು. ನನ್ನ ಖಾಯಂ ಗಿರಾಕಿಯ ಹತ್ತಿರ ಹೋಗಿ ಹಜಾಮತಿ ಪೂರೈಸಿಕೊಂಡು ಹಿಂದಿರುಗುವ ಹೊತ್ತಿಗೆ ಮುಖದ ಮೇಲೆ ಕೈಯಾಡಿಸಿದರೆ ಗಡ್ಡ - ಮೀಸೆಯ ಕೂಳೆ ಕಂಡುಬರುವ ಸಾಧ್ಯತೆ ಹೆಚ್ಚು! ಆದ್ದರಿಂದ ಇಲ್ಲಿಯೇ ಇರುವ 'ದಿ ಕರ್ನಾಟಕ ಹೇರ್ ಕಟಿಂಗ್' ಸಲೂನಿಗೆ ಭೇಟಿ ಇತ್ತಾಗ ನನಗೆ ಉದಯ ವಾರ್ತೆ ಓದುವವರು ಹೇಳುವಂತೆ ಕ್ಷಣಕಾಲ ಅಯೋಮಯವಾಯ್ತು. ಅಲ್ಲಿರುವ ತಿರುಗು ಕುರ್ಚಿಗಳು, ಸುತ್ತಲೂ ಇರುವ ನಿಲುವುಗನ್ನಡಿಗಳು, ಷೆಲ್ಫಿನಲ್ಲೊಂದು ಟಿ.ವಿ., ಮೇಲೆ ತಿರುಗುವ ಪಂಖ, ಇವಲ್ಲದೆ ತಲೆ ಹೆರೆಯುವ ಉಪಕರಣಗಳು, ಗೋಡೆಯ ಮೇಲೆ ಸಿನಿಮಾ ನಟನಟಿಯರ ಕೇಶ ಶೃಂಗಾರದ ವಿವಿಧ ಫೋಟೋಗಳು, ಕಾರ್ಯಾಗಾರದಲ್ಲಿದ್ದ ಕುರ್ಚಿಗಳೆಲ್ಲ ಭರ್ತಿಯಾಗಿದ್ದುವು. ನನಗಿಂತ ಮೊದಲೇ ಬಂದ ಗಿರಾಕಿಗಳೆಲ್ಲ ತಮ್ಮ ಸರದಿಗಾಗಿ ಕಾಯುತ್ತಾ ಅಲ್ಲಿಯೇ ಇದ್ದ ಹಳೆಯ ಪತ್ರಿಕೆಗಳನ್ನು ತಿರುವಿ ಹಾಕುತ್ತಿದ್ದರು. ನಾನು ಅಲ್ಲಿಯೇ ಇದ್ದ ಬೆಂಚೊಂದರ ಮೇಲೆ ಕುಳಿತು ಕತ್ತರಿ - ಬಾಚಣಿಗೆಯ ಸಂಗೀತದಲ್ಲಿ ತಲ್ಲೀನನಾದಾಗ ಮನಸ್ಸು 30-40 ವರ್ಷಗಳ ಹಿಂದೆ ನಮ್ಮೂರಿನಲ್ಲಿ ಹುಡುಗನಾಗಿದ್ದಾಗ 'ಚೌರ' ಮಾಡಿಸುತ್ತಿದ್ದುದನ್ನು ನೆನೆಯತೊಡಗಿತು. ನಮ್ಮೂರಿನಲ್ಲಿ ಈಗಿನಂತೆ ಆಗ ಸಲೂನುಗಳು ಇರಲಿಲ್ಲ. ವಾರಕ್ಕೋ, ತಿಂಗಳಿಗೋ ಪಕ್ಕದ ಊರಿನಿಂದ ಬರುತ್ತಿದ್ದ ಹಡಪದ ಮಹದೇವಯ್ಯ ಊರಿನ ಯಜಮಾನರುಗಳ ಕಟ್ಟೆಯ ಮೇಲೆ ತನ್ನ ಕಾಯಕ ಪ್ರಾರಂಭಿಸುತ್ತಿದ್ದ. ಆ ಮನೆಯ ಯಜಮಾನರು, ಸಣ್ಣ ಹುಡುಗರು ಮತ್ತು ಯಾರಾದರೂ ಮಡಿ ಹೆಂಗಸರುಗಳಿದ್ದರೆ ಅವರ ತಲೆಗಳನ್ನು 'ಹೆರೆದು' ಮುಂದಿನ

ಮನೆಗೋ ಅಥವಾ ಅಲ್ಲಿಯೇ ಕಾದುಕುಳಿತು ಅವನನ್ನು ಕರೆದು ಯೋಗುತ್ತಿದ್ದವರ ಮನೆಗೆ ತೆರಳುತ್ತಿದ್ದ. ಮಾದೇವಯ್ಯನಿಗೆ ತಲೆಗಿಷ್ಟು ಕಾಸು ಕೊಡಬೇಕೆಂಬ ನಿಯಮವೇನೂ ಇರಲಿಲ್ಲ. ಸುಗ್ಗಿಯ ಕಾಲದಲ್ಲಿ ಇಂತಿಷ್ಟು ರಾಗಿಯೋ, ಭತ್ತವನ್ನೋ ಕೊಡಬೇಕಾಗಿತ್ತು. ಅವನ ಹತ್ತಿರ ಕ್ಷೌರ ಮಾಡಿಸಿಕೊಂಡ ನೆನಪು ನನಗೆ ಉಂಟು!

ಮಾದೇವಯ್ಯ ನಾಲ್ಕಾರು ಕಾಸು ಕಾಣುತ್ತಿದ್ದುದು ನಮ್ಮೂರ ಸಂತೆ ಶನಿವಾರದ ದಿವಸ. ಸಂತೆಯ ದಿನ ಮೈದಾನದ ಸಮೀಪದ ಹುಣಿಸೇಮರದ ಕೆಳಗೆ ತನ್ನ ಹಡಪವನ್ನು ತೆರೆದು ಕೂರುತ್ತಿದ್ದ. ಸಂತೆಗೆ ಬರುತ್ತಿದ್ದ ಆಚೀಚೆ ಹಳ್ಳಿಗರು ''ಮಾದೇವಯ್ಯ, ಸ್ವಲ್ಪ ಬೆವರು ತಗೆಯಣ್ಣ'' ಎಂತಲೋ, ''ಅಣ್ಣ ಎಲ್ಡು ಕೆಪ್ಪೆ (ಕೆನ್ನೆ) ಕೂದಲು ತೆಗೆಯಣ್ಣ'' ಎಂದಾಗ ಮಾದೇವಯ್ಯ ತನ್ನ ಅಂಗೈ ಅಗಲದ ಮೊಗ ಕಾಣದ ಕನ್ನಡಿ, ನೀರಿನ ಬಟ್ಟಲು ಮತ್ತು ಮೊಸೆಗಲ್ಲು ಸಿದ್ಧಮಾಡಿಕೊಂಡು ತನ್ನ ಕ್ಷೇಮ ಕತ್ತಿಯಿಂದ ಅವರ ಬಯಕೆಯನ್ನು ಈಡೇರಿಸಿಕೊಡುತ್ತಿದ್ದ ಬಂದ ಕಾಸಿನಿಂದ ಸಂತೆಯ ಸಾಮಾನು ಕೊಂಡೊಯ್ಯುತ್ತಿದ್ದ.

ಕಾಲ ಬದಲಾದಂತೆ ನಮ್ಮೂರಿನಲ್ಲಿಯೂ 'ಹೇರ್ ಕಟಿಂಗ್' ಅಂಗಡಿಯ ಬೋರ್ಡ್ ಇಲ್ಲದಿದ್ದರೂ ಮೇನ್ ರೋಡಿನ ಮಳಿಗೆಯಲ್ಲಿ ಗೋಣಿತಟ್ಟೆ ಹಾಸಿ ಅದರ ಮೇಲೆ 'ಗಿರಾಕಿ'ಗಳನ್ನು ಕೂರಿಸಿ ತಲೆ (ಕೂದಲು) ಕತ್ತರಿಸುತ್ತಿದ್ದ ಮುಸಲಪ್ಪ (ಹೆಸರು ಮರೆತಿದ್ದೇನೆ) ವಿಚಿತ್ರ ವ್ಯಕ್ತಿ. ಅಜಾನುಬಾಹು, ಕಚ್ಚೆಪಂಚೆ, ಮುಂಡುತೋಳು ಅಂಗಿ, ಗಿರಿಜಾ ಮೀಸೆ, ತಲೆಯ ಹಿಂದೆ ಜುಟ್ಟು! ಕಟಿಂಗ್ ಮಾಡುವಾಗ ಅತ್ತ ಇತ್ತ ಅಲುಗಾಡಿದರೆ ಅವನಿಗೆ ಎಲ್ಲಿಲ್ಲದ ಸಿಟ್ಟು. ಇನ್ನು ಅವನು ಹೆರೆಯುವಾಗ ಕಚಗುಳ್ಳಿ ಇಟ್ಟಂತಾಗಿ ತಲೆ ಕುಗ್ಗಿಸಿದರೆ ಸಿಟ್ಟಿನಿಂದ ''ಹುಷಾರ್, ಕತ್ತಿಕೆಲಸ!'' ಎಂದು ಕಿರುಚುತ್ತಿದ್ದ.

ಆನಂತರ ಬಂದ (ದಾಸಪ್ಪ, ಶಿವರುದ್ರಪ್ಪ, ಮಲ್ಲೇಶಪ್ಪ ಮುಂತಾದವರ) ಹೇರ್ ಕಟಿಂಗ್ ಸಲೂನ್‌ಗಳು ಸ್ವಲ್ಪ ಆಧುನೀಕರಣ ಹೊಂದಿದ್ದುವು, ಕುರ್ಚಿ - ಎದುರಿಗೆ ಕನ್ನಡಿ, ಕತ್ತಿ ಇತ್ಯಾದಿ ಸಾಧನಗಳು ಎದುರಿಗೊಂದು ದೇವರ ಫೋಟೊ - ಸದಾ ಉರಿಯುವ ದೀಪ! ಮುಖ್ಯವಾಗಿ ವಕ್ರವಕ್ರವಾಗಿ ಕನ್ನಡದಲ್ಲಿ ಬರೆದ ಕಟಿಂಗ್ ಮಾಡಿಸಲು ಗೊತ್ತುಪಡಿಸಿದ ದರದ ಪಟ್ಟಿ! - ಹೀಗೆ ನಮ್ಮೂರಿನ ಸಲೂನು ಅನುಭವಗಳು.

ಮಹಾನಗರಕ್ಕೆ ಬಂದ ಮೇಲೆ ಪಳ್ನಿಸಾಮಿಗೆ ನಾನು ಮಾಮೂಲು ಗಿರಾಕಿ. ಎಷ್ಟೋ ವರ್ಷಗಳ ಅವನ ಕತ್ತರಿ ಮೆಶೀನುಗಳಿಗೆ ನನ್ನ ತಲೆ ತಗ್ಗಿಸಿತ್ತು! ಕಾಲ ಉರುಳಿದಂತೆ ಕೂದಲು ಬೆಳ್ಳಗಾಗಲು ಪ್ರಾರಂಭವಾದಾಗೊಮ್ಮೆ ಪಳ್ನಿಸಾಮಿ

''ಸ್ವಾ, ಕೂದ್ಲೆಲ್ಲಾ ಬೆಳ್ಗಾಯ್ತಿದೆ. ಮುಂದಿನ ಸಲ ಬಂದಾಗ ಡೈ ಮಾಡ್ತೀನಿ' ಅಂದಾಗ ''ಬಿಡಯ್ಯ ವಯಸ್ಸಾಯ್ತು ಕೂದಲು ಉದುರುತ್ತೆ, ಇಲ್ಲ ಬೆಳ್ಳಗಾಗುತ್ತೆ ಇದೆಲ್ಲಾ ಕಾಮನ್'' ಎಂದೆ. ಪುನಃ ಪಳ್ನಿಸ್ವಾಮಿ ಬಣ್ಣದ ವಿಷಯ ಎತ್ತಿರಲಿಲ್ಲ. ಆಗ ನನಗೆ ಸುಮತೀಂದ್ರ, ನಾಡಿಗರ 'ಬೋಳು ತಲೆ ಮತ್ತು ಬಿಳಿತಲೆ' ಕವನದ (ಅಪರಂಜಿಯಲ್ಲಿ ಪ್ರಕಟವಾದ)

ಬೋಳು ತಲೆಗಿಂತಲೂ ಬಿಳಿಯ ತಲೆ ಉತ್ತಮ
ಬೆಳುದಿಂಗಳ ಹಾಗೆ ಕಾಣಬಹುದು
ಬಿಳಿಯ ತಲೆಗಿಂತಲೂ ಬೋಳು ತಲೆ ಉತ್ತಮ
ಮನೆಗೆ ಕನ್ನಡಿ ಯಾಕೆ? ತಲೆಯೆ ಸಾಕು

ಕಪ್ಪು ಕೂದಲಿನಿಂದ ಪಡ್ಡೆ ಹುಡುಗರ ಹಾಗೆ
ರಸಿಕ ಪೋಲಿಯ ಹಾಗೆ ಕಾಣಬೇಕೇಕೆ?
ಬಿಳಿಯ ಕೂದಲಿನಿಂದ ಜ್ಞಾನವೃದ್ಧನ ಹಾಗೆ
ಸಭ್ಯನಾಗಿಯೆ ಕಂಡು ಇರಬಾರದೇಕೆ?

ಈ ಸಾಲುಗಳು ನೆನಪಿಗೆ ಬರುತ್ತಿತ್ತು.

ಎಷ್ಟೋ ಹೊತ್ತು ಮನಸ್ಸು ಹಿಂದಿನದೆಲ್ಲಾ ನೆನೆಯುತ್ತಿರುವಾಗ Next Please ಎಂದಿತು ವ್ಯಕ್ತಿ. ವಾಸ್ತವ ಜಗತ್ತಿಗೆ ಬಂದಾಗ ನನ್ನ ಸರದಿ ಬಂದಿತ್ತು. ತಿರುಗು ಕುರ್ಚಿಯಲ್ಲಿ ನನ್ನನ್ನು ಕೂರಿಸಿದ. ನಾನವನಿಗೆ ಹೇಳಬೇಕಾದುದನ್ನು ಹೇಳಿ ನನ್ನ ತಲೆಯನ್ನವನಿಗೆ ಅರ್ಪಿಸಿದೆ. (ಅವನಿಗೆ ಅರ್ಥವಾಯ್ತೊ, ಇಲ್ಲವೋ ತಿಳಿಯದು!) ಸ್ಥಿತಪ್ರಜ್ಞನಂತೆ ಕಣ್ಮುಚ್ಚಿ ಕುಳಿತೆ ಕೆಲವೇ ನಿಮಿಷ ಅವೇನೇನು ಮಾಡುತ್ತಿದ್ದಾನೆಂದು ತಿಳಿಯುವ ಮುನ್ನವೇ ಕಾರ್ಯ ಮಿಂಚಿಹೋಗಿತ್ತು. ನಾನು ಅವನಿಗೆ 'ಸಣ್ಣ'ಗೆ ಮಾಡೆಂದು ಹೇಳಿದ್ದೆ. ಆದರವನು 'ನುಣ್ಣ'ಗೆ ಮಾಡಿದ್ದ! ಕೇಳಿದಷ್ಟು ದುಡ್ಡು ಕೊಟ್ಟು 'ಕಾಸು ಹಾಳು ತಲೆಯೂ ಬೋಳು' ಎಂದುಕೊಂಡು ಮನೆಗೆ ಹಿಂದಿರುಗಿದ್ದೆ.

ನನ್ನ ಈ ಅನುಭವವನ್ನು ನೆನೆದಾಗಲೆಲ್ಲಾ 'ಗೊರೂರು' ರವರ ''ಕ್ಷೌರಸಂಹಿತೆ'', ''ಹಾರುವಯ್ಯ ಹಜಾಮನಾದ'' ಎಂಬ ಪ್ರಬಂಧಗಳು ನೆನಪಿಗೆ ಬರುತ್ತವೆ. ನಿಮಗೂ ಇಂತಹ ಅನುಭವವಾಗಿರಬಹುದಲ್ಲವೆ?



ಶ್ರೀಮತಿ ಶಾಂತಾ ಮತ್ತು ಶ್ರೀ ಸಿ. ಆರ್. ರಘು

ಇವರ ಸವಿನೆನಪಿಗೆ

ಪೂರ್ಣಿಮಾ ರಘು ಗೌಡ – ಸುಧೀರ್ ಗೌಡ


ಶ್ರೀಹರಿ ಕದಾಂಬಿ.

hmt Watches
DESH KI DHADKAN

ಮೋಹಕ, ಸುಂದರ ಹಾಗೂ ಆಕರ್ಷಣೀಯ ಸ್ವರ್ಣ ಕ್ವಾರ್ಟ್ಜ್ ಗಡಿಯಾರಗಳು ಎಚ್‌ಎಮ್‌ಟಿಯವರಿಂದ ಕಂಗೊಳಿಸುವ ಗೋಲ್ಡ್ ಪ್ಲೇಟೆಡ್‌ನೊಂದಿಗೆ, ನಿಮಗಾಗಿ ಕೇವಲ ರೂ. 555/- ಕ್ಕೆ!

ಇದಲ್ಲದೆ, ಎಚ್‌ಎಮ್‌ಟಿಯ ಬೃಹತ್ ಶ್ರೇಣಿಯಲ್ಲಿ ಆಟೋಮ್ಯಾಟಿಕ್ ಹಾಗೂ ಮೆಕ್ಯಾನಿಕಲ್ ಕೈಗಡಿಯಾರಗಳು, ಎಲ್ಲರ ಕೈಗೆ ಎಟುಕುವ ಬೆಲೆಗಳಲ್ಲಿ, ವಿವಿಧ ಶೈಲಿಗಳಲ್ಲಿ ದೊರೆಯುತ್ತವೆ.

ಒಂದು ಸುಂದರ ಗೋಲ್ಡ್ ಪ್ಲೇಟೆಡ್ ಗಡಿಯಾರ ಕೇವಲ ರೂ. 555/-ಕ್ಕೆ



Swarna
QUARTZ
from
hmt

ಹೆಚ್ಚಿನ ವಿವರಗಳಿಗೆ ಈ ಕೂಪನ್ನು ಭರ್ತಿ ಮಾಡಿ ಇವರಿಗೆ ಕಳುಹಿಸಿ.
ದಿ ಜನರಲ್ ಮಾರ್ಕೆಟಿಂಗ್ ಮ್ಯಾನೇಜರ್ (ಗಡಿಯಾರಗಳು),
ಎಚ್‌ಎಮ್‌ಟಿ ಲಿಮಿಟೆಡ್, 59, ಬಳ್ಳಾರಿ ರಸ್ತೆ, ಬೆಂಗಳೂರು-560 032.
ದೂರವಾಣಿ: 3335032 ಫ್ಯಾಕ್ಸ್: 3338950

* ಗರಿಷ್ಠ ಮಾರಾಟ ಬೆಲೆ.
ಸಗಟು ಖರೀದಿಯ ಮೇಲೆ ವಿಶೇಷ ರಿಯಾಯಿತಿ.

ಹೌದು, ನಾನು ಎಚ್‌ಎಮ್‌ಟಿ ಗಡಿಯಾರಗಳನ್ನು ಖರೀದಿಸಲು ಬಯಸುತ್ತೇನೆ. ದಯವಿಟ್ಟು ನಿಮ್ಮ ಸೇಲ್ಸ್ ಎಕ್ಸಿಕ್ಯೂಟಿವ್ ಅವರನ್ನು ಕಳುಹಿಸಿಕೊಡಿ.

ಹೆಸರು : ______________ ವಿಳಾಸ : ______________

ಸಂಸ್ಥೆ ______________ ಹುದ್ದೆ : ______________ ದೂರವಾಣಿ : ______________

MASS/HMT/1285-98

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003. Printed at RAVI GRAPHICS, 62, 4th Cross, SSI Area, Rajajinagar, Bangalore 560 010.
Editor : M. SHIVAKUMAR